ಆರ್.ಬಿ.ಐ/2006–07/37
ಆರ್‌ಪಿಸಿ.ಡಿ.ಪಿಎಲ್‌ಎನ್‌ಎಫ್‌ಎಸ್. ಬಿಸಿ.ಸಂ. 6/06.02.31/2007–08

ಜುಲೈ 2, 2007

ರಿಗೆ

ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರು/ ಮುಖ್ಯ ಕಾರ್ಯಕಾರಿ ಅಧಿಕಾರಿಗಳು/
ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು
(ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು / ಸ್ಥಳೀಯ ಪ್ರಾದೇಶಿಕ ಬ್ಯಾಂಕುಗಳು ಸೇರಿದಂತೆ)

ಮಾನ್ಯರೇ,

**ಪ್ರಧಾನ ಸುತ್ತೋಲೆ – ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆ ವಲಯಕ್ಕೆ ಸಾಲ**

ಭಾರತೀಯ ರಿಸರ್ವ್ ಬ್ಯಾಂಕು ಕಿರು, ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಸಾಲನೀಡುವುದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾರ್ಗದರ್ಶಿ ಸೂತ್ರಗಳು / ಸೂಚನೆಗಳು / ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಿರುವುದು ನಿಮಗೆ ತಿಳಿದಿರಬಹುದು. ಬ್ಯಾಂಕುಗಳಿಗೆ ಪ್ರಚಲಿತ ಸೂಚನೆಗಳು ಒಂದೇ ಜಾಗದಲ್ಲಿ ದೊರೆಯುವಂತಾಗಲು ಚಾಲ್ತಿಯಲ್ಲಿರುವ ಮಾರ್ಗದರ್ಶಿ ಸೂತ್ರಗಳು / ಸೂಚನೆಗಳು / ನಿರ್ದೇಶನಗಳನ್ನು ಒಳಗೊಂಡ ಪ್ರಧಾನ ಸುತ್ತೋಲೆಯನ್ನು ತಯಾರಿಸಿ ಲಗತ್ತಿಸಲಾಗಿದೆ. ವಾಣಿಜ್ಯ ಬ್ಯಾಂಕುಗಳು ಕಿರು, ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯದ ವ್ಯಾಪ್ತಿಗೆ ಸಂಬಂಧಿಸಿದಂತೆ ನೀಡುವ ಸಾಲದ ಬಗ್ಗೆ, ಭಾರತೀಯ ರಿಸರ್ವ್ ಬ್ಯಾಂಕು ಜೂನ್ 30, 2007ರ ವರೆಗೆ ನೀಡಿದ ಸೂಚನೆಗಳನ್ನು ಕ್ರೋಢೀಕರಿಸಿ ಈ ಪ್ರಧಾನ ಸುತ್ತೋಲೆಯ ಅನುಸೂಚಿಯಲ್ಲಿ ಪಟ್ಟಿ ಮಾಡಲಾಗಿದೆ.

ದಯವಿಟ್ಟು ಸ್ವೀಕೃತಿಯನ್ನು ನೀಡಿ.

ತಮ್ಮ ವಿಶ್ವಾಸಿ

(ಜಿ. ಶ್ರೀನಿವಾಸನ್)
ಮುಖ್ಯ ಮಹಾ ವ್ಯವಸ್ಥಾಪಕರು

# ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆ ವಲಯಕ್ಕೆ ಸಾಲ

## ವಿಭಾಗ 1

### 1. ಸಣ್ಣ ಉದ್ದಿಮೆಗಳು

**1.1.1. ಸಣ್ಣ (ತಯಾರಿಕೆ) ಉದ್ದಿಮೆಗಳು**

ವಸ್ತುಗಳ ತಯಾರಿ / ಉತ್ಪಾದನೆ ಅಥವಾ ಸಂರಕ್ಷಣೆಯಲ್ಲಿ ತೊಡಗಿದ್ದು ಕಾರ್ಖಾನೆ ಮತ್ತು ಯಂತ್ರಗಳಲ್ಲಿ ಹೂಡಿರುವ ಬಂಡವಾಳ ರೂ. 5 ಕೋಟಿಯನ್ನು ಮೀರದಂತಿರುವ (ಭೂಮಿ ಮತ್ತು ಕಟ್ಟಡವನ್ನು ಹಾಗೂ ಸಣ್ಣ ಕೈಗಾರಿಗಳ ಸಚಿವಾಲಯ ತನ್ನ ದಿನಾಂಕ ಅಕ್ಟೋಬರ್ 5, 2006ರ ಅಧಿಸೂಚನೆ ಸಂ. ಎಸ್.ಓ. 1722(ಇ)ರ ಅನುಬಂಧ – 1ರಲ್ಲಿ ಸೂಚಿಸಿದ ಬಾಬುಗಳನ್ನು ಹೊರತುಪಡಿಸಿ ಮೂಲ ಬೆಲೆ) ಉದ್ದಿಮೆಗಳು.

**1.1.2 ಸಣ್ಣ(ಸೇವಾ) ಉದ್ದಿಮೆಗಳು**

ಸೇವೆಗಳನ್ನು ಒದಗಿಸುವುದರಲ್ಲಿ / ನೀಡುವುದರಲ್ಲಿ ನಿರತವಾಗಿರುವ ಮತ್ತು ಸಲಕರಣೆಗಳಲ್ಲಿ (ಭೂಮಿ ಮತ್ತು ಕಟ್ಟಡ, ಪೀಠೋಪಕರಣ, ಸಲಕರಣೆಗಳು ಮತ್ತು ನೀಡುವ ಸೇವೆಗಳಿಗೆ ನೇರವಾಗಿ ಸಂಬಂಧಿಸದ ಇತರ ಬಾಬುಗಳನ್ನು ಹೊರತುಪಡಿಸಿ ಹಾಗೂ ಕಿರು, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯಿದೆ [ಎಮ್.ಎಸ್.ಎಮ್.ಇ.ಡಿ] 2006 ರ ಅಡಿಯಲ್ಲಿ ತಿಳಿಸಿದಂತೆ ಮೂಲ ಬೆಲೆ) ಬಂಡವಾಳ ರೂ. 2 ಕೋಟಿಯನ್ನು ಮೀರದಂತಿರುವ ಉದ್ದಿಮೆಗಳು

**1.2.1 ಕಿರು (ತಯಾರಿಕೆ) ಉದ್ದಿಮೆಗಳು**

ವಸ್ತುಗಳ ತಯಾರಿಕೆ/ ಉತ್ಪಾದನೆ ಅಥವಾ ಸಂರಕ್ಷಣೆಯಲ್ಲಿ ತೊಡಗಿದ್ದು ಘಟಕವಿರುವ ಸ್ಥಳವನ್ನು ಪರಿಗಣಿಸದೆ ಕಾರ್ಖಾನೆ ಮತ್ತು ಯಂತ್ರಗಳಲ್ಲಿ ಹೂಡಿರುವ ಬಂಡವಾಳ ರೂ. 25 ಲಕ್ಷ ಮೀರದಂತಿರುವ (ಭೂಮಿ ಮತ್ತು ಕಟ್ಟಡವನ್ನು ಹಾಗೂ 1.1.1ರಲ್ಲಿ ಸೂಚಿಸಿರುವ ಬಾಬುಗಳನ್ನು ಹೊರತುಪಡಿಸಿ ಮೂಲ ಬೆಲೆ) ಉದ್ದಿಮೆಗಳು

**1.2.2 ಕಿರು (ಸೇವಾ) ಉದ್ದಿಮೆಗಳು**

ಸೇವೆಗಳನ್ನು ಒದಗಿಸುವುದರಲ್ಲಿ / ನೀಡುವುದರಲ್ಲಿ ನಿರತವಾಗಿರುವ ಮತ್ತು ಸಲಕರಣೆಗಳಲ್ಲಿ (ಭೂಮಿ ಮತ್ತು ಕಟ್ಟಡ, ಪೀಠೋಪಕರಣ, ಸಲಕರಣೆಗಳು ಮತ್ತು 1.1.2ರಲ್ಲಿ ತಿಳಿಸಿದಂತೆ ಮೂಲ ಬೆಲೆ) ಬಂಡವಾಳ ರೂ. 10 ಲಕ್ಷ ಮೀರದಂತಿರುವ ಉದ್ದಿಮೆಗಳು

**1.3.1 ಮಧ್ಯಮ (ತಯಾರಿಕೆ) ಉದ್ದಿಮೆಗಳು**

ವಸ್ತುಗಳ ತಯಾರಿಕೆ/ ಉತ್ಪಾದನೆ ಅಥವಾ ಸಂರಕ್ಷಣೆಯಲ್ಲಿ ತೊಡಗಿದ್ದು ಕಾರ್ಖಾನೆ ಮತ್ತು ಯಂತ್ರಗಳಲ್ಲಿ ಹೂಡಿರುವ ಬಂಡವಾಳ ರೂ. 5 ಕೋಟಿಯನ್ನು ಮೀರಿ ಆದರೆ

ರೂ 10 ಕೋಟಿಯನ್ನು ಮೀರದ (ಭೂಮಿ ಮತ್ತು ಕಟ್ಟಡವನ್ನು ಹಾಗೂ ಸಣ್ಣ ಕೈಗಾರಿಗಳ ಸಚಿವಾಲಯ ತನ್ನ ತಾ. ಅಕ್ಟೋಬರ್ 5, 2006ರ ಅಧಿಸೂಚನೆ ಸಂ. ಎಸ್.ಓ. 1722(ಇ)ರಲ್ಲಿ ಸೂಚಿಸಿದ ಬಾಬುಗಳನ್ನು ಹೊರತುಪಡಿಸಿ ಮೂಲ ಬೆಲೆ) ಉದ್ದಿಮೆಗಳು

**1.3.2 ಮಧ್ಯಮ (ಸೇವಾ) ಉದ್ದಿಮೆಗಳು**

ಸೇವೆಗಳನ್ನು ಒದಗಿಸುವುದರಲ್ಲಿ / ನೀಡುವುದರಲ್ಲಿ ನಿರತವಾಗಿರುವ ಮತ್ತು ಸಲಕರಣೆಗಳಲ್ಲಿ (ಭೂಮಿ ಮತ್ತು ಕಟ್ಟಡ, ಪೀಠೋಪಕರಣ, ಸಲಕರಣೆಗಳು ಮತ್ತು 1.1.2ರಲ್ಲಿ ತಿಳಿಸಿದಂತೆ ಮೂಲ ಬೆಲೆ) ಬಂಡವಾಳ ರೂ. 2 ಕೋಟಿಯನ್ನು ಮೀರಿ ಆದರೆ ರೂ 5ನ್ನು ಮೀರದ ಉದ್ದಿಮೆಗಳು

ಸಣ್ಣ ಮತ್ತು ಕಿರು (ಸೇವಾ) ಉದ್ದಿಮೆಗಳು ಸಣ್ಣ ರಸ್ತೆ ಮತ್ತು ಜಲ ಸಾರಿಗೆ ನಿರ್ವಾಹಕರು, ಸಣ್ಣ ವ್ಯಾಪಾರ, ವೃತ್ತಿನಿರತರು ಮತ್ತು ಸ್ವ-ಉದ್ಯೋಗಿಗಳು ಮತ್ತು ಇತರ ಎಲ್ಲ ಸೇವಾ ಉದ್ದಿಮೆಗಳು

ಬ್ಯಾಂಕುಗಳು ಮಧ್ಯಮ ಉದ್ದಿಮೆಗಳಿಗೆ ನೀಡಿದ ಸಾಲವನ್ನು ಆದ್ಯತಾ ವಲಯದ ಸಾಲವಾಗಿ ಪರಿಗಣಿಸಲಾಗುವುದಿಲ್ಲ

**1.4 ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಕ್ಷೇತ್ರ (ಕೆವಿಐ)**

ಕಾರ್ಯಕ್ಷೇತ್ರದ ಗಾತ್ರ, ಘಟಕವಿರುವ ಸ್ಥಳ ಮತ್ತು ಕಾರ್ಖಾನೆ ಹಾಗೂ ಯಂತ್ರಗಳಲ್ಲಿ ಮೂಲ ಹೂಡಿಕೆಯ ಪ್ರಮಾಣವನ್ನು ಪರಿಗಣಿಸದೆ ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಕ್ಷೇತ್ರಕ್ಕೆ ನೀಡಿದ ಮುಂಗಡವನ್ನು ಆದ್ಯತಾ ವಲಯದ ಸಣ್ಣ ಉದ್ದಿಮೆಯ ಉಪಗುರಿಯ(ಶೇ. 60) ಭಾಗವಾಗಿ ಪರಿಗಣನೆಗೆ ಅರ್ಹವಾಗಿರುತ್ತವೆ.

**1.5 ಪರೋಕ್ಷ ಹಣಕಾಸು**

**1.5.1** ಕುಶಲಕರ್ಮಿಗಳು, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳಿಗೆ ವಿಕೇಂದ್ರೀಕೃತ ವಲಯದಲ್ಲಿ ಆದಾನ ಒದಗಿಸುವವರು ಮತ್ತು ಪ್ರದಾನ ಕ್ರಯ ವಿಕ್ರಯ ಮಾಡುವುದರಲ್ಲಿ ಭಾಗಿಯಾದ ವ್ಯಕ್ತಿಗಳು

**1.5.2** ವಿಕೇಂದ್ರೀಕೃತ ವಲಯದಲ್ಲಿರುವ ಉತ್ಪಾದಕರ ಸಹಕಾರಿ ಸಂಘಗಳಿಗೆ ನೀಡಿದ ಮುಂಗಡ, ಅಂದರೆ: ಕುಶಲಕರ್ಮಿಗಳು, ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳು

**1.5.3** ಕೃಷಿಯೇತರವಲಯಕ್ಕಾಗಿಯೇ ಹಣಕಾಸನ್ನು ಒದಗಿಸುವ ಉದ್ದೇಶದಿಂದ ನಬಾರ್ಡ್ ಬಿಡುಗಡೆ ಮಾಡಿದ ವಿಶೇಷ ಬಾಂಡುಗಳಲ್ಲಿ ಮಾರ್ಚ್ 31, 2007 ರಂದು ಇದ್ದಂತೆ ಪ್ರಸ್ತುತವಿರುವ ಬ್ಯಾಂಕುಗಳ ಹೂಡಿಕೆಗಳನ್ನು, ಅವು ಪಕ್ವವಾಗುವುದು ಅಥವಾ ಮಾರ್ಚ್ 2010 ಯಾವುದು ಮೊದಲೋ ಅದನ್ನು ಸಣ್ಣ ಉದ್ದಿಮೆಗಳ ಪರೋಕ್ಷ ಹಣಕಾಸಾಗಿ ವರ್ಗೀಕರಿಸಬಹುದು. ಆದರೆ ಮಾರ್ಚ್ 31, 2007ರ ನಂತರ ವಿಶೇಷ ಬಾಂಡುಗಳಲ್ಲಿ ಮಾಡಿದ ಹೂಡಿಕೆ ಈ ವರ್ಗೀಕರಣಕ್ಕೆ ಅರ್ಹವಾಗುವುದಿಲ್ಲ.

**1.5.4** ಭಾರತದಲ್ಲಿ ಕಚೇರಿಯನ್ನು ಹೊಂದಿರುವ ವಿದೇಶೀ ಬ್ಯಾಂಕುಗಳು, ಆದ್ಯತಾ ವಲಯದ ಗುರಿ / ಉಪ ಗುರಿಯನ್ನು ಸಾಧಿಸದೇ ಇರುವುದಕ್ಕಾಗಿ ಸಿಡ್ಬಿ(ಎಸ್.ಐ.ಡಿ.ಬಿ.ಐ)ಯಲ್ಲಿ ಹೊಂದಿರುವ, ತಾ. ಎಪ್ರೀಲ್ 30, 2007 ರಂದು ಬಾಕಿ ಇರುವ ಠೇವಣಿಯನ್ನು ಅವು ಪಕ್ವವಾಗುವುದು ಅಥವಾ ಮಾರ್ಚ್ 2010 ಯಾವುದು ಮೊದಲೋ ಅದನ್ನು ಸಣ್ಣ ಉದ್ದಿಮೆಗಳ ಪರೋಕ್ಷ ಹಣಕಾಸಾಗಿ ವರ್ಗೀಕರಿಸಬಹುದು. ಆದರೆ ಮಾರ್ಚ್ 31, 2007ರಂದು ಅಥವಾ ಅನಂತರ, ಆದ್ಯತಾ ವಲಯದ ಗುರಿ / ಉಪ ಗುರಿಯನ್ನು ಸಾಧಿಸದೇ ಇರುವುದಕ್ಕಾಗಿ ಸಿಡ್ಬಿ(ಎಸ್.ಐ.ಡಿ.ಬಿ.ಐ)ಯಲ್ಲಿ ಮಾಡಿದ ಠೇವಣಿ ಈ ವರ್ಗೀಕರಣಕ್ಕೆ ಅರ್ಹವಾಗುವುದಿಲ್ಲ.

**1.5.5** ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗೆ ಸಣ್ಣ ಮತ್ತು ಕಿರು ಉದ್ಯಮಗಳಿಗೆ ಮುಂದುವರಿದ ಸಾಲಕ್ಕಾಗಿ ಬ್ಯಾಂಕುಗಳು ಮಂಜೂರು ಮಾಡಿದ ಸಾಲ (ತಯಾರಿ ಹಾಗೂ ಸೇವೆ)

---

## ವಿಭಾಗ II

### ಆದ್ಯತಾ ವಲಯದ ಮುಂಗಡಗಳೆಂದು ಪರಿಗಣಿಸಬಹುದಾದ ನಿರ್ದಿಷ್ಟ ಬಗೆಯ ನಿಧಿ ಬೆಳವಣಿಗೆಗಳು

**1. ಹೂಡಿಕೆಗಳು**

**1.1 ಸಂರಕ್ಷಿತ ಆಸ್ತಿ**

ಸಂರಕ್ಷಿತ ಆಸ್ತಿಯಲ್ಲಿ ಬಾಂಕುಗಳು ಹೂಡಿದ ಹಣ, ಆದ್ಯತಾ ವಲಯದ ವಿಭಿನ್ನ ವಿಭಾಗಗಳನ್ನು ಪ್ರತಿನಿಧಿಸುವ ಸಾಲಗಳಾಗಿ, ಭದ್ರತೆಗೆ ಒಳಪಟ್ಟ ಆಸ್ತಿಗೆ ಅನುಗುಣವಾಗಿ ಆದ್ಯತಾ ವಲಯದ(ನೇರ ಅಥವಾ ಪರೋಕ್ಷ)ಆಯಾ ವರ್ಗಗಳಲ್ಲಿ ವರ್ಗೀಕರಣಕ್ಕೆ ಅರ್ಹವಾಗಿರುತ್ತವೆ ಆದರೆ ಸಂರಕ್ಷಣೆಗೊಂಡ ಆಸ್ತಿ ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಪ್ರಾರಂಭಗೊಂಡ ಸಂರಕ್ಷಿತ ಆಸ್ತಿಯಾಗಿರಬೇಕು ಮತ್ತು ಸಂರಕ್ಷಣೆಗಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾನದಂಡಗಳನ್ನು ಪಾಲಿಸಿ ಸಂರಕ್ಷಣೆಗೊಂಡಿರಬೇಕು. ಇದರ ಅರ್ಥ ಬ್ಯಾಂಕ್, ಮೇಲೆ ತಿಳಿಸಿದ ವರ್ಗದ ಆಸ್ತಿಗಳಲ್ಲಿ ಸಂರಕ್ಷಣೆಗಾಗಿ ಹೂಡಿದ ಹಣ, ಸಂರಕ್ಷಣೆ ಮೊದಲು ಆದ್ಯತಾ ವಲಯದ ಮುಂಗಡವಾಗಿ ವರ್ಗೀಕರಣಕ್ಕೆ ಅರ್ಹವಾಗಿರಬೇಕು.

**1.2** ಆದ್ಯತಾ ವಲಯದಲ್ಲಿ ವರ್ಗೀಕರಣಕ್ಕೆ ಅರ್ಹವಾದ ಸಾಲ ಆಸ್ತಿ ಆದ್ಯತಾ ವಲಯದ (ನೇರ ಅಥವಾ ಪರೋಕ್ಷ) ಆಯಾ ವರ್ಗಗಳಲ್ಲಿ ವರ್ಗೀಕರಣಕ್ಕೆ ಅರ್ಹವಾಗಿರುತ್ತದೆ ಆದರೆ ಖರೀದಿಸಿದ ಸಾಲವು ಆದ್ಯತಾ ವಲಯದಲ್ಲಿ ವರ್ಗೀಕರಣಕ್ಕೆ ಅರ್ಹವಾಗಿರಬೇಕು; ಸಾಲ ಆಸ್ತಿಯನ್ನು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ಖರೀದಿಸಿದ್ದಾಗಿರಬೇಕು (ಅಗತ್ಯ ಜಾಗರೂಕತೆ ವಹಿಸಿ ಮತ್ತು ನ್ಯಾಯಸಮ್ಮತ ಬೆಲೆಯೊಂದಿಗೆ), ಮಾರಾಟಗಾರನ ಮೇಲೆ ಯವುದೇ ಅವಲಂಬನೆ ಇಲ್ಲದೆ ಮತ್ತು ಅರ್ಹ ಸಾಲ ಆಸ್ತಿಯನ್ನು ಖರೀದಿಯಿಂದ ಆರು ತಿಂಗಳೊಳಗಾಗಿ, ವಾಪಸಾತಿಯಲ್ಲದೆ ಬೇರೆ ಉದ್ದೇಶಗಳಿಗಾಗಿ ವಿಲೇವಾರಿ ಮಾಡಿರಬಾರದು.

**1.3** ನಷ್ಟ ಹಂಚಿಕೆಯ ಆಧಾರದಲ್ಲಿ ಅಂತರ್ ಬ್ಯಾಂಕೀಯ ಪ್ರಮಾಣ ಪತ್ರ(ಐಬಿಪಿಸಿ)ಗಳಲ್ಲಿ ಬ್ಯಾಂಕುಗಳು ಹೂಡಿದ ಹಣ ಆದ್ಯತಾ ವಲಯದ ಆಯಾ ವರ್ಗಗಳಲ್ಲಿ ವರ್ಗೀಕರಣಕ್ಕೆ ಅರ್ಹವಾಗಿರುತ್ತದೆ ಆದರೆ ಭದ್ರತೆಗೆ ಒಳಪಟ್ಟ ಆಸ್ತಿಯು ಆದ್ಯತಾ ವಲಯದಲ್ಲಿ ಆಯಾ ವರ್ಗಗಳಲ್ಲಿ ವರ್ಗೀಕರಣಕ್ಕೆ ಅರ್ಹವಾಗಿರಬೇಕು ಮತ್ತು ಹೂಡಿಕೆಯಿಂದ ಕನಿಷ್ಟ 180 ದಿನಗಳಾದರೂ ಇಟ್ಟುಕೊಂಡಿರಬೇಕು.

**2 ಸಣ್ಣ ಉದ್ಯಮದ ಹಣಕಾಸು ಕೇಂದ್ರಗಳ ಯೋಜನೆ**

ಗವರ್ನರ್ ಅವರು 2005–06ರ ವಾರ್ಷಿಕ ನೀತಿ ನಿರೂಪಣೆಯಲ್ಲಿ ಘೋಷಿಸಿದಂತೆ, 'ಸಣ್ಣ ಉದ್ಯಮದ ಹಣಕಾಸು ಕೇಂದ್ರ' ಗಳಾಗಿ ನಾಮಕರಣಗೊಂಡ ಗುಂಪುಗಳಲ್ಲಿರುವ ಬ್ಯಾಂಕುಗಳ ಶಾಖೆಗಳು ಮತ್ತು ಸಿಡ್ಬಿಯ ನಡುವೆ ಸಣ್ಣ ಉದ್ದಿಮೆಗಳ ಸಚಿವಾಲಯ, ಭಾರತ ಸರಕಾರದ ವಿತ್ತ ಸಚಿವಾಲಯ ಬ್ಯಾಂಕಿಂಗ್ ವಿಭಾಗ, ಸಿಡ್ಬಿ, ಐಬಿಎ ಮತ್ತು ಆಯ್ದ ಬ್ಯಾಂಕುಗಳಲ್ಲಿ ಸಮಾಲೋಚಿಸಿ ಕುಶಲ ವ್ಯಾವಹಾರಿಕ ಸಂಬಂಧ ಯೋಜನೆಯನ್ನು ರಚಿಸಿ ಅದನ್ನು ತಾ. ಮೆ. 20, 2005ರಂದು ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ ಕಾರ್ಯಗತಗೊಳಿಸುವ ಸಲುವಾಗಿ ಕಳುಹಿಸಿಕೊಡಲಾಯಿತು. ಸಿಡ್ಬಿಯು ಮೊದಲಿಗೆ 149 ಕೇಂದ್ರಗಳಲ್ಲಿ ಇದನ್ನು ಪ್ರಾರಂಭಿಸಲು ನಿರ್ಧರಿಸಿತ್ತು. ಸಿಡ್ಬಿಯು ಈ ತನಕ 16 ಬ್ಯಾಂಕುಗಳ (ಭ್ಯಾಂಕ್ ಅಫ್ ಇಂಡಿಯಾ, ಯುಕೋ ಬ್ಯಾಂಕ್, ಎಸ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್, ಪಂಜಾಬ್ ನ್ಯಾಶನಲ್ ಬ್ಯಾಂಕ್, ದೇನಾ ಬ್ಯಾಂಕ್, ಆಂಧ್ರ ಬ್ಯಾಂಕ್, ಇಂಡಿಯನ್ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್, ಐಡಿಬಿಐ ಬ್ಯಾಂಕ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ, ಮತ್ತು ಫೆಡರಲ್ ಬ್ಯಾಂಕ್) ಜೊತೆ ಜ್ಞಾಪಕ ಒಪ್ಪಂದ ಪತ್ರವನ್ನು ಕಾರ್ಯಗತಗೊಳಿಸಿದೆ. ಅಸ್ತಿತ್ವದಲ್ಲಿರುವ ಸಿಡ್ಬಿ ಶಾಖೆಗಳು ವ್ಯವಹರಿಸುತ್ತಿರುವ ಸಣ್ಣ / ಮಧ್ಯಮ ಉದ್ಯಮ ಸಮೂಹದ ಪಟ್ಟಿಯನ್ನು ಅನುಸೂಚಿ II ರಲ್ಲಿ ನೀಡಲಾಗಿದೆ.

---

## ವಿಭಾಗ – III

**ದೇಶೀಯ ವಾಣಿಜ್ಯ ಬ್ಯಾಂಕುಗಳಿಂದ ಆದ್ಯತಾ ವಲಯ ಸಾಲದ ಗುರಿ(ಆರ್.ಆರ್.ಬಿ ಗಳನ್ನು ಹೊರತುಪಡಿಸಿ)**

**1. ವಿದೇಶೀ ಬ್ಯಾಂಕುಗಳನ್ನು ಹೊರತುಪಡಿಸಿ ಎಲ್ಲ ದೇಶೀಯ ವಾಣಿಜ್ಯ ಬ್ಯಾಂಕುಗಳ ಮುಖ್ಯ ಗುರಿ**

**1.1** ದೇಶೀಯ ವಾಣಿಜ್ಯ ಬ್ಯಾಂಕುಗಳು ಆದ್ಯತಾ ವಲಯದಲ್ಲಿ (ಸಣ್ಣ ಉದ್ದಿಮೆ ವಲಯ ಸೇರಿದಂತೆ) ಉದ್ದರಿ ವಿಸ್ತರಣೆ ಮಾಡುವುದನ್ನು ನಿರೀಕ್ಷಿಸಲಾಗುತ್ತದೆ. ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿ ಅಥವಾ ಸಂತುಲನ ಪತ್ರ(ಬ್ಯಾಲೆನ್ಸ್ ಶೀಟ್)ದಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತ ಯಾವುದು ಹೆಚ್ಚೋ ಅದರ ಶೇಕಡ 40 ಆದ್ಯತಾ ವಲಯದ ಉದ್ದರಿ ಇರುವಂತೆ ನೋಡಿಕೊಳ್ಳಬೇಕು.

**1.2** ಸಣ್ಣ ಉದ್ಯಮ ವಲಯಕ್ಕೆ ಯಾವುದೇ ಉಪ–ಗುರಿ ನಿಗದಿಪಡಿಸಿಲ್ಲವಾದರೂ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ ವಲಯಕ್ಕೆ ಉದ್ದರಿ ಹರಿವನ್ನು ಹೆಚ್ಚಿಸಲು ಸರಕಾರವು ಪ್ರಕಟಿಸಿದ ನೀತಿ ಪ್ರಸ್ತಾವನೆಯಲ್ಲಿ ಬ್ಯಾಂಕುಗಳು ಈ ವಲಯಕ್ಕೆ ಉದ್ದರಿ ಹರಿವನ್ನು ಹೆಚ್ಚಿಸಲು, ಹಾಗೂ 2005–06 ರಿಂದ 2009–10 ರ 5 ವರ್ಷ ಅವಧಿಯಲ್ಲಿ ಈ ವಲಯಕ್ಕೆ ನೀಡಿದ ಸಾಲ ದ್ವಿಗುಣ ವಾಗುವಂತೆ, ವರ್ಷ ದಿಂದ ವರ್ಷಕ್ಕೆ ಕನಿಷ್ಟ 20 ಶೇಕಡ ಹೆಚ್ಚಳದ ಸ್ವಂತ ಗುರಿಯನ್ನು ನಿಗದಿಪಡಿಸಿಕೊಳ್ಳಬಹುದು.

**1.3 ಸಣ್ಣ ಉದ್ದಿಮೆ ವಲಯದ ಎಲ್ಲ ಭಾಗಗಳಿಗೆ ಉದ್ದರಿ ದೊರೆಯುವಂತಾಗಲು ಬ್ಯಾಂಕುಗಳು**

(ಎ) ಕಾರ್ಖಾನೆ ಮತ್ತು ಯಂತ್ರಗಳಲ್ಲಿ ರೂ. 5 ಲಕ್ಷಕ್ಕಿಂತ ಕಡಿಮೆ ಹೂಡಿಕೆಯ ಕಿರು(ತಯಾರಿಕೆ) ಉದ್ದಿಮೆಗಳು ಮತ್ತು ರೂ. 2 ಲಕ್ಷಕ್ಕಿಂತ ಕಡಿಮೆ ಹೂಡಿಕೆಯ ಕಿರು(ಸೇವೆ) ಉದ್ದಿಮೆಗಳಿಗೆ, ಸಣ್ಣ ಉದ್ಯಮ ವಲಯಕ್ಕೆ ನೀಡುವ ಒಟ್ಟು ಸಾಲದ 40 ಶೇಕಡ ನೀಡಬೇಕಾಗುತ್ತದೆ.

(ಬಿ) ಕಾರ್ಖಾನೆ ಮತ್ತು ಯಂತ್ರಗಳಲ್ಲಿ ರೂ. 5 ಲಕ್ಷಕ್ಕಿಂತ ಮೇಲ್ಪಟ್ಟು ಮತ್ತು ರೂ. 25 ಲಕ್ಷದ ವರೆಗಿನ ಹೂಡಿಕೆಯ ಕಿರು(ತಯಾರಿಕೆ) ಉದ್ದಿಮೆಗಳು ಮತ್ತು ರೂ. 2 ಲಕ್ಷಕ್ಕಿಂತ ಮೇಲ್ಪಟ್ಟು ಮತ್ತು ರೂ 10 ಲಕ್ಷದ ವರೆಗಿನ ಹೂಡಿಕೆಯ ಕಿರು(ಸೇವೆ) ಉದ್ದಿಮೆಗಳಿಗೆ, ಸಣ್ಣ ಉದ್ಯಮ ವಲಯಕ್ಕೆ ನೀಡುವ ಒಟ್ಟು ಸಾಲದ 20 ಶೇಕಡ ನೀಡಬೇಕಾಗುತ್ತದೆ. (ಆದುದರಿಂದ ಸಣ್ಣ ಉದ್ಯಮಗಳಿಗೆ ನೀಡುವ ಉದ್ದರಿಯ 60 ಶೇಕಡ ಕಿರು ಉದ್ಯಮಕ್ಕೆ ದೊರೆಯಬೇಕು)

**2. ವಿದೇಶಿ ಬ್ಯಾಂಕುಗಳ ಗುರಿ**

2.1.1 ವಿದೇಶಿ ಬ್ಯಾಂಕುಗಳು ಆದ್ಯತಾ ವಲಯದ (ಸಣ್ಣ ಉದ್ದಿಮೆಗಳೂ ಸೇರಿದಂತೆ) ಉದ್ದರಿ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿ ಅಥವಾ ಬ್ಯಾಲೆನ್ಸ್ ಶೀಟ್ ನಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತ ಯಾವುದು ಹೆಚ್ಚೋ ಅದರ ಶೇಕಡ 32 ಆದ್ಯತಾ ವಲಯದ ಉದ್ದರಿ ಇರುವಂತೆ ಅದನ್ನು ವಿಸ್ತರಿಸಲು ನೋಡಿಕೊಳ್ಳಬೇಕು.

2.1.2 ವಿದೇಶೀ ಬ್ಯಾಂಕುಗಳು ಸಾಧಿಸಬೇಕಾದ ಶೇಕಡ 32 ಒಟ್ಟು ಗುರಿಯಲ್ಲಿ ಸಣ್ಣ ಉದ್ದಿಮೆಗಳಿಗೆ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯ 10 ಪ್ರತಿಶತ ಇರಬಾರದು ಅಥವಾ ಬ್ಯಾಲೆನ್ಸ್ ಶೀಟ್ ನಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತ ಎರಡರಲ್ಲಿ ಯಾವುದು ಹೆಚ್ಚೋ ಅದನ್ನು ಪರಿಗಣಿಸಬೇಕು.

2.1.3 ಸಣ್ಣ ಉದ್ದಿಮೆ ವಲಯದ ಎಲ್ಲ ಭಾಗಗಳಿಗೆ ಉದ್ದರಿ ದೊರೆಯುವಂತಾಗಲು ಬ್ಯಾಂಕುಗಳು

(ಎ) ಕಾರ್ಖಾನೆ ಮತ್ತು ಯಂತ್ರಗಳಲ್ಲಿ ರೊ. 5 ಲಕ್ಷಕ್ಕಿಂತ ಕಡಿಮೆ ಹೂಡಿಕೆಯ ಕಿರು(ತಯಾರಿಕೆ) ಉದ್ದಿಮೆಗಳು ಮತ್ತು ರೂ. 2 ಲಕ್ಷಕ್ಕಿಂತ ಕಡಿಮೆ ಹೂಡಿಕೆಯ ಕಿರು(ಸೇವೆ) ಉದ್ದಿಮೆಗಳಿಗೆ, ಸಣ್ಣ ಉದ್ಯಮ ವಲಯಕ್ಕೆ ನೀಡುವ ಒಟ್ಟು ಸಾಲದ 40 ಶೇಕಡ ನೀಡಬೇಕಾಗುತ್ತದೆ

(ಬಿ) ಕಾರ್ಖಾನೆ ಮತ್ತು ಯಂತ್ರಗಳಲ್ಲಿ ರೂ. 5 ಲಕ್ಷಕ್ಕಿಂತ ಮೇಲ್ಪಟ್ಟು ಮತ್ತು ರೂ. 25 ಲಕ್ಷದ ವರೆಗಿನ ಹೂಡಿಕೆಯ ಕಿರು(ತಯಾರಿಕೆ) ಉದ್ದಿಮೆಗಳು ಮತ್ತು ರೂ. 2 ಲಕ್ಷಕ್ಕಿಂತ ಮೇಲ್ಪಟ್ಟು ಮತ್ತು ರೂ 10 ಲಕ್ಷದ ವರೆಗಿನ ಹೂಡಿಕೆಯ ಕಿರು(ಸೇವೆ) ಉದ್ದಿಮೆಗಳಿಗೆ, ಸಣ್ಣ ಉದ್ಯಮ ವಲಯಕ್ಕೆ ನೀಡುವ ಒಟ್ಟು ಸಾಲದ 20 ಶೇಕಡ ನೀಡಬೇಕಾಗುತ್ತದೆ. (ಆದುದರಿಂದ ಸಣ್ಣ ಉದ್ಯಮಗಳಿಗೆ ನೀಡುವ ಉದ್ದರಿಯ 60 ಶೇಕಡ ಕಿರು ಉದ್ಯಮಕ್ಕೆ ದೊರೆಯಬೇಕು)

(ಬ್ಯಾಂಕುಗಳ ನಿವ್ವಳ ಉದ್ದರಿ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ 1934ರ 42(2)ನೇ ಕಲಮಿನ ಪ್ರಕಾರ ಸಲ್ಲಿಸಿದ ಪಾಕ್ಷಿಕ ವರದಿಯ ಅಂಕಿ ಸಂಖ್ಯೆಗಳಿಗೆ ತಾಳೆಯಾಗಬೇಕು. ಆದ್ಯತಾ ವಲಯದ ಗುರಿ / ಉಪ ಗುರಿಗಾಗಿ ನಿವ್ವಳ ಬ್ಯಾಂಕ್ ಉದ್ದರಿಯನ್ನು ಲೆಕ್ಕ ಹಾಕುವಾಗ ಎಫ್.ಸಿ.ಎನ್.ಆರ್(ಬಿ) ಮತ್ತು ಎನ್.ಆರ್.ಎನ್.ಆರ್ ಕೆಳಗೆ ಬಾಕಿಯಿರುವ ಠೇವಣಿಯನ್ನು ಗಣನೆಗೆ ತೆಗೆದುಕೊಳ್ಳಬಾರದು. ಆದರೆ ಡಿಬಿಓಡಿ.ಡಿಐಆರ್.ಬಿಸಿ.93/13.01.09/2001–02 ದಿನಾಂಕ ಎಪ್ರಿಲ್ 29, 2002ರಲ್ಲಿ ಸೂಚಿಸಿದಂತೆ ಎನ್. ಅರ್.ಎನ್.ಆರ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಿರುವುದರಿಂದ ಇದರ ಕೆಳಗೆ ಅಸ್ತಿತ್ವದಲ್ಲಿರುವ ಖಾತೆಗಳನ್ನು ಅವುಗಳು ಪಕ್ವವಾಗುವ ತನಕ ಮಾತ್ರ ಮುಂದುವರಿಸಿಕೊಂಡು ಹೋಗಬಹುದು)

3. **ಆದ್ಯತಾ ವಲಯದ ಸಾಲದ ಕೊರತೆಗಾಗಿ ವಿದೇಶಿ ಬ್ಯಾಂಕುಗಳಿಂದ ಸಿಡ್ಬಿಯಲ್ಲಿ ಠೇವಣಿ**

ವಿದೇಶಿ ಬ್ಯಾಂಕುಗಳು ನಿಗದಿತ ಆದ್ಯತಾ ವಲಯದ ಗುರಿ / ಉಪ ಗುರಿಯ ಸಾಧನೆಯಲ್ಲಿ ಉಂಟಾದ ಕೊರತೆ ತುಂಬಲು ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್(ಸಿಡ್ಬಿ)ಯು ಸ್ಥಾಪಿಸಿದ ಸಣ್ಣ ಉದ್ಯಮಗಳ ಅಭಿವೃದ್ಧಿ ನಿಧಿ(ಎಸ್.ಇ.ಡಿ.ಎಫ್)ಗೆ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸುವ ಇನ್ನಿತರ ಉದ್ದೇಶಗಳಿಗಾಗಿ ಕೊಡುಗೆಯನ್ನು ಕೊಡಬೇಕಾಗಿದೆ.

ಇದನ್ನು ನಿಗದಿಪಡಿಸಲು, ತಕ್ಷಣದ ಹಿಂದಿನ ವರ್ಷ ಮಾರ್ಚ್ ತಿಂಗಳ ಕೊನೆಯ ವರದಿಮಾಡುವ ಶುಕ್ರವಾರ ಆದ್ಯತಾ ವಲಯದ ಸಾಧನೆಯನ್ನು ಪರಿಗಣಿಸಲಾಗುವುದು.

ಸಣ್ಣ ಉದ್ಯಮಗಳ ಅಭಿವೃದ್ಧಿ ನಿಧಿಯ ಮೂಲ ನಿಧಿಯನ್ನು ಭಾರತೀಯ ರಿಸರ್ವ ಬ್ಯಾಂಕು ವರ್ಷದಿಂದ ವರ್ಷಕ್ಕೆ ನಿರ್ಧಾರಮಾಡುತ್ತದೆ. ಠೇವಣಿಗಳ ಸ್ವರೂಪವನ್ನು ಮೂರು ವರ್ಷ ಅಥವಾ ಭಾರತೀಯ ರಿಸರ್ವ್ ಬ್ಯಾಂಕು ಕಾಲದಿಂದ ಕಾಲಕ್ಕೆ ನಿರ್ಧಾರಮಾಡಿದಂತೆ ಇರುತ್ತದೆ. ವಿದೇಶಿ ಬ್ಯಾಂಕುಗಳು ಆದ್ಯತಾ ವಲಯಕ್ಕೆ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯ 32 ಶೇಕಡಾದಲ್ಲಿ ಕೊರತೆಯಿರುವ ಅಥವಾ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತ ಎರಡರಲ್ಲಿ ಯಾವುದು ಹೆಚ್ಚೋ ಅದನ್ನು ಸಮನಾದ–ಅನುಪಾತ ಆಧಾರದಲ್ಲಿ, ವಿದೇಶಿ ಬ್ಯಾಂಕುಗಳು ಮೂಲ ನಿಧಿಯ 50 ಶೇಕಡ ಕೊಡುಗೆಯಾಗಿ ನೀಡುತ್ತವೆ. ನಿಧಿಯ ಇನ್ನುಳಿದ 50 ಶೇಕಡವನ್ನು ವಿದೇಶಿ ಬ್ಯಾಂಕುಗಳು ಸಣ್ಣ ಉದ್ದಿಮೆ ಮತ್ತು ನಿರ್ಯಾತ ಕ್ಷೇತ್ರಗಳಿಗೆ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯ ಅನುಕ್ರಮವಾಗಿ 10 ಮತ್ತು 12 ಶೇಕಡ ಅಥವಾ ಬ್ಯಾಲೆನ್ಸ್ ಶೀಟ್ ನಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತ ಎರಡರಲ್ಲಿ ಯಾವುದು ಹೆಚ್ಚೋ ಅದನ್ನು ಸಮನಾದ–ಅನುಪಾತ

ಆಧಾರದಲ್ಲಿ, ಕೊಡುಗೆಯಾಗಿ ನೀಡುತ್ತವೆ. ಆದರೆ ವಿದೇಶಿ ಬ್ಯಾಂಕುಗಳು ಕೊಡುಗೆಯಾಗಿ ನೀಡಬೇಕಾದ ಮೊತ್ತ ನಿಗದಿತ ಆದ್ಯತಾ ವಲಯದ ಗುರಿ / ಉಪ ಗುರಿಯ ಸಾಧನೆಯಲ್ಲಿ ಉಂಟಾದ ಕೊರತೆಯನ್ನು ಮೀರುವುದಿಲ್ಲ.
ಸಂಬಂಧಿಸಿದ ವಿದೇಶಿ ಬ್ಯಾಂಕುಗಳನ್ನು, ಸಿಡ್ಬಿ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಇನ್ನಾವುದೇ ಸಂಸ್ಥೆಗಳಿಗೆ ನಿಧಿಯ ಅವಶ್ಯಕತೆಯಿದ್ದಾಗ, ಒಂದು ತಿಂಗಳ ಸೂಚನೆಯನ್ನು ನೀಡಿ ಕರೆಸಿಕೊಳ್ಳಬಹುದು.
ವಿದೇಶಿ ಬ್ಯಾಂಕುಗಳ ಕೊಡುಗೆಯ ಮೇಲೆ ಬಡ್ಡಿ ದರ, ಠೇವಣಿ ಅವಧಿ ಮುಂತಾದುವನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ನಿಗದಿಮಾಡುತ್ತದೆ.

4. ಆದ್ಯತಾ ವಲಯದ ಗುರಿಗಳನ್ನು ತಲುಪದೇಇರುವುದು, ವಿವಿಧ ಉದ್ದೇಶಗಳಿಗಾಗಿ ಶಾಸನಬದ್ಧ ಅನುಮತಿ /ಮಂಜೂರಾತಿಯನ್ನು ನೀಡುವಾಗ ಪರಿಗಣಿತವಾಗುತ್ತವೆ.
(ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿ ಅಥವಾ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತ(ಕಾಲಕಾಲಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ ನ ಬ್ಯಾಂಕಿಂಗ್ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಇಲಾಖೆ ವ್ಯಾಖ್ಯಾನಿಸಿದಂತೆ) ಹಿಂದಿನ ವರ್ಷದ ಮಾರ್ಚ್ 31ರಂದರ ಬಾಕಿಯ ಮೇಲೆ ಲೆಕ್ಕ ಹಾಕಲಾಗುತ್ತದೆ. ಇದಕ್ಕಾಗಿ ಲೆಕ್ಕ ಹಾಕುವಾಗ ಎಫ್.ಸಿ.ಎನ್.ಆರ್(ಬಿ) ಮತ್ತು ಎನ್.ಆರ್.ಎನ್.ಆರ್ ಕೆಳಗೆ ಬಾಕಿಯಿರುವ ಠೇವಣಿಯನ್ನು ಆದ್ಯತಾ ವಲಯದ ಸಾಲದ ಬಗ್ಗೆ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯನ್ನು ಲೆಕ್ಕಹಾಕುವಾಗ ಕಡಿಯಲಾಗುವುದಿಲ್ಲ. ಆದ್ಯತಾ ವಲಯಕ್ಕೆ ಸಾಲನೀಡುವುದಕ್ಕಾಗಿ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯೆಂದರೆ ನಿವ್ವಳ ಬ್ಯಾಂಕ್ ಉದ್ದರಿ ಜೊತೆಗೆ ಪಕ್ವತೆಗಾಗಿ ಉಳಿಸಿಕೊಂಡಿರುವ ಎಸ್ಸೆಲ್ಲೇತರ ಬಾಂಡುಗಳಲ್ಲಿ ಮಾಡಿದ ಹೂಡಿಕೆಯನ್ನು ಸೇರಿಸಬೇಕು. ಬ್ಯಾಂಕುಗಳು, ಸರಕಾರದಿಂದ ಬಿಡುಗಡೆಯಾದ ಮರುಹೂಡಿಕೆ ಬಾಂಡುಗಳಲ್ಲಿ ಮಾಡಿದ ಹೂಡಿಕೆಯನ್ನು ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯ ಲೆಕ್ಕಾಚಾರಕ್ಕಾಗಿ ಪರಿಗಣಿಸಲಾಗುವುದಿಲ್ಲ. ಆರ್.ಪಿ.ಸಿ.ಡಿ.ಸಂ.ಪ್ಲಾನ್.ಬಿಸಿ.84/04.0901/2006–07 ದಿನಾಂಕ ಎಪ್ರಿಲ್ 30, 2007ರಂದು ಬ್ಯಾಂಕುಗಳು ಹೊಂದಿದ ಪಕ್ವತೆಗಾಗಿ ಉಳಿಸಿಕೊಂಡಿರುವ ಎಸ್ಸೆಲ್ಲಾರೇತರ ಬಾಂಡುಗಳಲ್ಲಿ ಹೂಡಿಕೆಯನ್ನು, ಮಾರ್ಚ್ 31, 2010ನವರೆಗೆ ಹೊಂದಾಣಿಕೆ ಮಾಡಿದ ನಿವ್ವಳ ಬ್ಯಾಂಕ್ ಉದ್ದರಿಯ ಲೆಕ್ಕಚಾರಕ್ಕಾಗಿ ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಆದರೆ, ಪಕ್ವತೆಗಾಗಿ ಉಳಿಸಿಕೊಂಡಿರುವ ಎಸ್ಸೆಲ್ಲಾರೇತರ ಬಾಂಡುಗಳಲ್ಲಿ ಬ್ಯಾಂಕುಗಳು ಮಾಡಿದ ಹೊಸ ಹೂಡಿಕೆಯನ್ನು ಇದಕ್ಕಾಗಿ ಪರಿಗಣಿಸಲಾಗುತ್ತದೆ. ಹೂಡಿಕೆಗೆ ಅನುಗುಣವಾಗಿ ನಬಾರ್ಡ್ / ಸಿಡ್ಬಿಗಳಲ್ಲಿ ಆದ್ಯತಾ ವಲಯ ಸಾಲದ ಗುರಿ / ಉಪಗುರಿಗಳ ಸಾಧನೆಯ ಕೊರತೆ ನೀಗಿಸಲು ನಬಾರ್ಡ್ / ಸಿಡ್ಬಿಗಳಲ್ಲಿ ಮಾಡಿದ ಠೇವಣಿಯನ್ನು ಬ್ಯಾಲೆನ್ಸ್ ಶೀಟ್‌ನ ಐಟಂ 1(vi) 'ಇತರೆ' ಕೆಳಗೆ ಶೆಡ್ಯೂಲ್ 8– 'ಹೂಡಿಕೆ' ಎಂದು ನಮೂದಿಸಿದರೂ ಇದನ್ನು ಪಕ್ವತೆಗಾಗಿ ಉಳಿಸಿಕೊಂಡಿರುವ ಎಸ್ಸೆಲ್ಲೇತರ ಬಾಂಡುಗಳಲ್ಲಿ ಮಾಡಿದ ಹೂಡಿಕೆಯೆಂದು ಪರಿಗಣಿಸಲಾಗುವುದಿಲ್ಲ. ಬ್ಯಾಲೆನ್ಸ್ ಶೀಟ್ ನಲ್ಲಿ ತೋರಿಸದಿರುವ ಉದ್ದರಿಗೆ ಸಮನಾದ ಮೊತ್ತವನ್ನು ಲೆಕ್ಕಹಾಕಲು ಬ್ಯಾಂಕುಗಳು ಚಾಲ್ತಿಯಲ್ಲಿರುವ ಬಹಿರಂಗಪಡಿಸುವ ಪದ್ಧತಿಯನ್ನು ಬ್ಯಾಂಕುಗಳು ಉಪಯೋಗಿಸಬಹುದು. ಆದ್ಯತಾ ವಲಯ ಸಾಲದ ಗುರಿ / ಉಪಗುರಿಗಳನ್ನು ಲೆಕ್ಕ ಹಾಕುವಾಗ ಅಂತರ್ ಬ್ಯಾಂಕ್ ಕೊಡು ಕೊಳ್ಳುವಿಕೆಯನ್ನು ಪರಿಗಣಿಸಲಾಗುವುದಿಲ್ಲ.)

# ವಿಭಾಗ IV

## ಸಣ್ಣ ಉದ್ದಿಮೆಗಳ ವಲಯಕ್ಕೆ ಸಾಲ ನೀಡಲು ಸಾಮನ್ಯ ಮಾರ್ಗದರ್ಶಿ ಸೂತ್ರಗಳು / ಸೂಚನೆಗಳು

### 1. ಅರ್ಜಿಗಳ ವಿಲೇವಾರಿ

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಾಲಕ್ಕಾಗಿ, ಅರ್ಜಿಗಳು ಎಲ್ಲ ರೀತಿಯಲ್ಲೂ ಪರಿಪೂರ್ಣವಾಗಿದ್ದರೆ ಮತ್ತು 'ಚೆಕ್ ಲಿಸ್ಟ್' ಜೊತೆಯಲ್ಲಿದ್ದರೆ, ರೂ. 25,000 ವರೆಗಿನ ಸಾಲಕ್ಕಾಗಿ ಬಂದ ಅರ್ಜಿಗಳನ್ನು 2 ವಾರಗಳಲ್ಲೂ ರೂ. 5ಲಕ್ಷದ ವರೆಗಿನ ಸಾಲಕ್ಕಾಗಿ ಬಂದ ಅರ್ಜಿಗಳನ್ನು 4 ವಾರಗಳಲ್ಲೂ ವಿಲೇವಾರಿ ಮಾಡಬೇಕು.

### 2. ಸಹಭದ್ರತೆಗಳು

ಸಣ್ಣ ಪ್ರಮಾಣದ ಕೈಗಾರಿಕೆ ಸಾಲಖಾತೆಗಳಿಂದ ಪಡೆಯಬಹುದಾದ ಸಹಭದ್ರತೆಯ ವಿನಾಯತಿ ಮಿತಿಯು ರೂ. 5ಲಕ್ಷ. ಆದರೆ, ಸಣ್ಣ ಪ್ರಮಾಣದ ಕೈಗಾರಿಕೆಗಳ ಉತ್ತಮ ವಹಿವಾಟು ಮತ್ತು ಹಣಕಾಸಿನ ದಾಖಲೆಗಳ ಆಧಾರದಲ್ಲಿ, ಅಗತ್ಯ ಸಹಭದ್ರತೆಯ ವಿನಾಯತಿಯನ್ನು ರೂ. 25ಲಕ್ಷದವರೆಗಿನ ಸಾಲಕ್ಕೂ ವಿಸ್ತರಿಸಬಹುದು(ಸೂಕ್ತ ಪ್ರಾಧಿಕಾರದ ಮಂಜೂರಾತಿಯೊಂದಿಗೆ).

### 3. ಸಂಯುಕ್ತ ಸಾಲ

ಸಣ್ಣ ಪ್ರಮಾಣದ ಕೈಗಾರಿಕಾ ಉದ್ಯಮಿಗಳು ರೂ 1 ಕೋಟಿ ವರೆಗಿನ ದುಡಿಯುವ ಬಂಡವಾಳ ಮತ್ತು ಅವಧಿ ಸಾಲದ ಅಗತ್ಯಗಳನ್ನು ಏಕ ಗವಾಕ್ಷಿಯ ಮೂಲಕ ಪಡೆಯುವಂತೆ ಸಂಯುಕ್ತ ಸಾಲವನ್ನು ಮಂಜೂರುಮಾಡಬಹುದು.

### 4. ವಿಶಿಷ್ಟ ಸಣ್ಣ ಪ್ರಮಾಣದ ಉದ್ದಿಮೆ / ಸಣ್ಣ–ಮಧ್ಯಮ ಉದ್ದಿಮೆ ಶಾಖೆಗಳು

ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಪ್ರತಿ ಜಿಲ್ಲೆಯಲ್ಲಿ ಕನಿಷ್ಟ ಒಂದಾದರೂ ವಿಶಿಷ್ಟಶಾಖೆಯನ್ನು ತೆರೆಯಬೇಕೆಂದು ಸಲಹೆ ನೀಡಲಾಗಿದೆ. ಇದಲ್ಲದೆ, ಈ ವಲಯಕ್ಕೆ ಒಟ್ಟಾರೆ ಉತ್ತಮ ಸೇವೆಯನ್ನು ಒದಗಿಸುವ ಉದ್ದೇಶದಿಂದ ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಗೆ ಹೆಚ್ಚು ವಿಶಿಷ್ಟ ಸಣ್ಣ ಪ್ರಮಾಣದ ಉದ್ದಿಮೆ ಶಾಖೆಗಳನ್ನು ತೆರೆಯುವಂತೆ ಪ್ರೋತ್ಸಾಹಿಸಲು, ಕನಿಷ್ಟ ಒಂದಾದರೂ ವಿಶಿಷ್ಟ ಸಣ್ಣ ಪ್ರಮಾಣದ ಉದ್ದಿಮೆ ಶಾಖೆಯನ್ನು ತೆರೆಯುವಂತೆ ಸೂಚಿಸಲಾಗಿದೆ ಮತ್ತು ತಮ್ಮ ಮುಂಗಡದ 60 ಶೇಕಡಗಿಂತ ಹೆಚ್ಚು ಮೊತ್ತವನ್ನು ಸಣ್ಣ ಪ್ರಮಾಣದ ಉದ್ಯಮಕ್ಕೆ ನೀಡಿದ ಶಾಖೆಗಳನ್ನು ಬ್ಯಾಂಕುಗಳು ಸಣ್ಣ ಪ್ರಮಾಣ ಉದ್ಯಮದ ಸಾಮಾನ್ಯ ಶಾಖೆಗಳಾಗಿ ವರ್ಗೀಕರಿಸಲು ಅನುಮತಿಸಲಾಗಿದೆ. ಸಣ್ಣ–ಮಧ್ಯಮ ಉದ್ದಿಮೆ ವಲಯಕ್ಕೆ ಉದ್ದರಿಯನ್ನು ಹೆಚ್ಚಿಸುವುದಕ್ಕಾಗಿ ಭಾರತ ಸರಕಾರವು ಘೋಷಿಸಿರುವ ಪಾಲಿಸಿ ಪ್ಯಾಕೇಜಿನನ್ವಯ ಸಾರ್ವಜನಿಕ ವಲಯದ ಬ್ಯಾಂಕುಗಳು ಆಯ್ದ ಗುಂಪು / ಕೇಂದ್ರಗಳಲ್ಲಿ, ಸಣ್ಣ ಉದ್ದಿಮೆದಾರರಿಗೆ ಪ್ರಾಧಾನ್ಯವಿರುವ ಮತ್ತು ಉದ್ದಿಮೆದಾರರಿಗೆ ಸುಲಭ ಬ್ಯಾಂಕ್ ಉದ್ದರಿ ಸೌಲಭ್ಯವಿರುವ ಹಾಗೂ ಬ್ಯಾಂಕು ನೌಕರರು ಅಗತ್ಯ ಪರಿಣತಿಯನ್ನು ಹೆಚ್ಚಿಸಿಕೊಳ್ಳಲು ಅವಕಾಶವಿರುವ ವಿಶಿಷ್ಟ ಸಣ್ಣ–ಮಧ್ಯಮ ಉದ್ದಿಮೆ ಶಾಖೆಗಳಲ್ಲಿ ದೊರಕುವುದನ್ನು ಖಾತರಿಪಡಿಕೊಳ್ಳಬೇಕು. ವಿಶಿಷ್ಟ ಸಣ್ಣ ಪ್ರಮಾಣದ ಉದ್ದಿಮೆ ಶಾಖೆಗಳನ್ನು ಸಣ್ಣ–ಮಧ್ಯಮ ಉದ್ದಿಮೆ ಶಾಖೆಗಳಾಗಿ ಮರು–ನಿರ್ದಿಷ್ಟಗೊಳಿಸಬಹುದು. ಅವರ ಒಟ್ಟು ಸಾಮರ್ಥ್ಯವನ್ನು ಸಣ್ಣ

ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಹಣಕಾಸಿನ ಮತ್ತು ಇತರ ಸೇವೆಗಳನ್ನು ನೀಡಲು ಉಪಯೋಗಿಸಬಹುದಾದರೂ ಇತರ ವಲಯ / ಸಾಲ ಪಡೆಯುವವರಿಗೆ ಹಣಕಾಸನ್ನು ಒದಗಿಸುವುದು / ಇತರ ಸೇವೆಗಳನ್ನು ನೀಡುವುದಕ್ಕೆ ತಮ್ಮ ಕಾರ್ಯಾಚರಣೆಯನ್ನು ಉದಾರೀಕರಿಸಲಾಗಿದೆ.

## 5. ವಿಳಂಬ ಪಾವತಿ

ಸಣ್ಣ ಪ್ರಮಾಣದ ಮತ್ತು ಪೂರಕ ಉದ್ದಿಮೆಗಳ ವಿಳಂಬ ಪಾವತಿಗೆ ವಿದಿಸಲಾಗುವ ಬಡ್ಡಿ ತಿದ್ದುಪಡಿ ಕಾಯಿದೆ 1998ರ ತಿದ್ದುಪಡಿಯನ್ವಯ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಆಗುವ ವಿಳಂಬ ಪಾವತಿಯಾಗದಂತೆ ಎಚ್ಚರಿಕೆ ವಹಿಸಲು ದಂಡ ಸಂಬಂಧಿ ಉಪಬಂಧಗಳನ್ನು ಸೇರಿಸಲಾಯಿತು. ಅದು ಇತರ ವಿಷಯಗಳೊಂದಿಗೆ ಮುಂದಿನ ಷರತ್ತುಗಳನ್ನು ವಿಧಿಸುತ್ತದೆ (ಅ) ಕೊಡು–ಕೊಳ್ಳುವವರ ಮಧ್ಯೆ ಒಪ್ಪಂದ 120ದಿನಗಳನ್ನು ಮೀರಬಾರದು (ಆ) 120 ದಿನಗಳಿಗೆ ಮೀರದ, ಒಪ್ಪಲಾದ ಅವಧಿಗಿಂತ ವಿಳಂಬವಾದಲ್ಲಿ ಎಸ್.ಬಿ.ಐ.ಯ ಮುಖ್ಯ ಸಾಲ ದರದ ಒಂದೂವರೆ ಪಟ್ಟು ಬಡ್ಡಿ ಪಾವತಿ. ಇದಲ್ಲದೆ, ವಿಶೇಷವಾಗಿ ಸಣ್ಣ ಪ್ರಮಾಣದ ಉದ್ದಿಮೆಗಳಿಂದ ಮಾಡಿದ ಖರೀದಿಗೆ ಸಂಬಂಧಿಸಿದ ದೊಡ್ಡ ಸಾಲಗಾರರ ಪಾವತಿ ಬಾಧ್ಯತೆಗಳನ್ನು ಈಡೇರಿಸುವ ಉದ್ದೇಶಕ್ಕಾಗಿ, ಅವರು ತಮ್ಮ ಒಟ್ಟು ದುಡಿಯುವ ಬಂಡವಾಳದ ಮಿತಿಯೊಳಗೆ ಉಪ–ಮಿತಿಗಳನ್ನು ನಿಗದಿಪಡಿಸಲು ಸೂಚಿಸಲಾಗಿದೆ.

ಕಿರು, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ (ಎಮ್.ಎಸ್.ಎಮ್.ಇ.ಡಿ) ಕಾಯಿದೆ 2006ನ್ನು ಅಧಿನಿಯಮಿಸಿದ ನಂತರ, ಸಣ್ಣ ಪ್ರಮಾಣದ ಮತ್ತು ಪೂರಕ ಉದ್ದಿಮೆಗಳ ವಿಳಂಬ ಪಾವತಿಗೆ ವಿದಿಸಲಾಗುವ ಬಡ್ಡಿ ತಿದ್ದುಪಡಿ ಕಾಯಿದೆಯ ಚಾಲ್ತಿಯಲ್ಲಿದ್ದ ಉಪಬಂಧಗಳನ್ನು ಈ ಕೆಳಗಿನಂತೆ ಬಲಗೊಳಿಸಲಾಯಿತು:

(i) ಕೊಳ್ಳುವವನು, ಪೂರೈಕೆದಾರನೊಂದಿಗೆ ಲಿಖಿತವಾಗಿ ಒಪ್ಪಿದ ದಿನಾಂಕದಂದು ಅಥವಾ ಅದಕ್ಕಿಂತ ಮುಂಚಿತವಾಗಿ ಪಾವತಿ ಮಾಡುವುದು ಅಥವಾ ಒಪ್ಪಂದವಿಲ್ಲದಿದ್ದರೆ ನಿರ್ಧರಿಸಿದ ದಿನಕ್ಕೆ ಮುಂಚಿತವಾಗಿ ಪಾವತಿಸುವುದು. ಕೊಡು–ಕೊಳ್ಳುವವರ ಮಧ್ಯೆ ಒಪ್ಪಂದದ ಅವಧಿಯು 45ದಿನ ಮೀರಬಾರದು.

(ii) ಕೊಳ್ಳುವವನು ಪೂರೈಕೆದಾರನಿಗೆ ಲಿಖಿತವಾಗಿ ಪಾವತಿ ಮಾಡಲು ವಿಫಲನಾದಲ್ಲಿ, ಅವನು ಭಾರತೀಯ ರಿಸರ್ವ್ ಬ್ಯಾಂಕು ಘೋಷಿಸಿದ ಬ್ಯಾಂಕ್ ದರದ ಮೂರು ಪಟ್ಟು ದರದಲ್ಲಿ ನಿರ್ಧಾರಿತ ದಿನದಿಂದ ಅಥವಾ ಒಪ್ಪಿದ ದಿನದಿಂದ ಪ್ರತಿ ತಿಂಗಳು ಮೊಬಲಗಿನ ಮೇಲೆ ಚಕ್ರಬಡ್ಡಿಯನ್ನು ಪೂರೈಕೆದಾರನಿಗೆ ನೀಡಬೇಕಾಗುತ್ತದೆ.

(iii) ಪೂರೈಕೆದಾರನು ಒದಗಿಸಿದ ಯಾವುದೇ ಸರಕು ಅಥವಾ ಸೇವೆಗಳಿಗೆ ಕೊಳ್ಳುವವನು ಮೇಲೆ (ii)ದಲ್ಲಿ ಸೂಚಿಸಿದಂತೆ ಬಡ್ಡಿಯನ್ನು ಕೊಡಲು ಹೊಣೆಗಾರನಾಗಿರುತ್ತಾನೆ.

(iv) ಬಾಕಿಯಿರುವ ಯಾವುದೇ ಮೊಬಲಗಿನ ಬಗ್ಗೆ ತಕರಾರು ಇದ್ದ ಸಂದರ್ಭದಲ್ಲಿ ಸಂಬಂಧಿಸಿದ ರಾಜ್ಯ ಸರಕಾರ ರಚಿಸಿದ ಕಿರು ಮತ್ತು ಸಣ್ಣ ಉದ್ದಿಮೆಗಳ ಸುಗಮ ಪರಿಷತ್ತಿಗೆ ಕೋರಿಕೆಯನ್ನು ಸಲ್ಲಿಸಬೇಕಾಗುತ್ತದೆ.

**6. ರೋಗ ಗ್ರಸ್ಥ ಸಣ್ಣ ಪ್ರಮಾಣದ ಉದ್ದಿಮೆಗಳ ಪುನರ್ವಸತಿ ಮಾನದಂಡಗಳು (ಕೊಹ್ಲಿ ಕಾರ್ಯ ಸಮೂಹದ ಶಿಫಾರಸು ಆಧಾರಿತ)**

ಒಂದು ಘಟಕದ ಯಾವುದಾದರೂ ಸಾಲದ ಖಾತೆ 6 ತಿಂಗಳಿಗಿಂತ ಹೆಚ್ಚಾಗಿ ಕಳಪೆಯಾಗುಳಿದರೆ ಅಥವಾ ಘಟಕವು ಕನಿಷ್ಟ 2 ವರ್ಷಗಳಿಂದ ವಾಣಿಜ್ಯ ಉತ್ಪಾದನೆಯಲ್ಲಿದ್ದು ಅದರ ಸಂಚಯಿತ ನಗದು ನಷ್ಟದಿಂದಾಗಿ ನಿವ್ವಳ ಮೌಲ್ಯದಲ್ಲಿ 50 ಶೇಕಡ ಕೊರತೆಯಾಗಿದ್ದರೆ ಅದು ರೋಗಗ್ರಸ್ಥ ಘಟಕವೆಂದು ವ್ಯಾಖ್ಯಾನಿಸಲ್ಪಡುತ್ತದೆ. ಈ ಮಾನದಂಡವು ಬ್ಯಾಂಕುಗಳಿಗೆ ರೋಗಲಕ್ಷಣಗಳನ್ನು ಮುಂದಾಗಿ ಕಂಡುಕೊಳ್ಳಲು ಮತ್ತು ಘಟಕಗಳ ಪುನಶ್ಚೇತನಕ್ಕಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ. ಮಾರ್ಗಸೂಚಿಗಳನ್ವಯ ಪುನರ್ವಸತಿ ಕ್ರಮಗಳು, ಘಟಕವು ಪುನಶ್ಚೇತನದ ಸಂಭಾವ್ಯ ಸಾಮರ್ಥ್ಯವಿರುವ / ಸಾಮರ್ಥ್ಯವಿರುವ ಎಂದು ಘೋಷಣೆಯಾದ ದಿನಾಂಕದಿಂದ 6 ತಿಂಗಳೊಳಗೆ ಪುನರ್ವಸತಿ ಕ್ರಮಗಳನ್ನು ಸಂಪೂರ್ಣ ಜಾರಿಗೊಳಿಸಬೇಕು. ಪುನರ್ವಸತಿ ಕ್ರಮಗಳ ಗುರುತಿಸುವಿಕೆ ಮತ್ತು ಕಾರ್ಯಗತಗೊಳಿಸುವಿಕೆಯ ಈ 6 ತಿಂಗಳ ಅವಧಿಯಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು 'ಹಿಡಿದಿಡುವ ಕಾರ್ಯಾಚರಣೆ'ಯನ್ನು ಮಾಡಬೇಕಾಗುತ್ತದೆ. ಇದು ರುಗ್ಣ ಘಟಕಗಳು ಕೊನೇಪಕ್ಷ ಮಾರಾಟ ಉತ್ಪತ್ತಿಗಳ ಠೇವಣಿಯನ್ನು ದೊರಕಿಸುವ ಮಟ್ಟಿಗಾದರೂ ನಗದು ಉದ್ದರಿ ಖಾತೆಯಿಂದ ಹಣ ಪಡೆಯಲು ಸಾಧ್ಯಗೊಳಿಸುತ್ತದೆ.

ಪುನಶ್ಚೇತನದ ಸಂಭಾವ್ಯ ಸಾಮರ್ಥ್ಯವಿರುವ ರುಗ್ಣ ಸಣ್ಣ ಪ್ರಮಾಣದ ಉದ್ದಿಮೆಗಳು ಪರಿಹಾರ ಮತ್ತು ರಿಯಾಯಿತಿ ಮಂಜೂರುಮಾಡಲು ಈ ಕೆಳಗಿನವು ಸ್ಥೂಲ ಮಾನದಂಡಗಳಾಗಿವೆ:

(i) ದುಡಿಯುವ ಬಂಡವಾಳದ ಬಡ್ಡಿಯ ಮೇಲಿನ ಬಡ್ಡಿಯು ಚಾಲ್ತಿಯಲ್ಲಿರುವ ನಿಶ್ಚಿತ / ಪ್ರಧಾನ ಸಾಲ ದರದಿಂದ ಶೇಕಡ 1.5ರಷ್ಟು ಕಡಿಮೆ, ಅನ್ವಯವಾಗುವಂತೆ

(ii) ನಿಧಿಯುತ ಬಡ್ಡಿ ಅವಧಿ ಸಾಲ ಬಡ್ಡಿರಹಿತ

(iii) ದುಡಿಯುವ ಬಂಡವಾಳದ ಅವಧಿ ಸಾಲದ ಮೇಲೆ ವಿಧಿಸಬೇಕಾದ ಬಡ್ಡಿಯು ಚಾಲ್ತಿಯಲ್ಲಿರುವ ನಿಶ್ಚಿತ / ಪ್ರಧಾನ ಸಾಲ ದರದಿಂದ ಶೇಕಡ 1.5ರಷ್ಟು ಕಡಿಮೆ, ಅನ್ವಯವಾಗುವಂತೆ

(iv) ಅವಧಿ ಸಾಲದ ಮೇಲೆ ನೀಡಬೇಕಾದ ಬಡ್ಡಿ ರಿಯಾಯಿತಿ ದಸ್ತಾವೇಜು ದರಕ್ಕಿಂತ ಕಡಿಮೆ ಶೇಕಡ 2ಕ್ಕೆ ಹೆಚ್ಚಿರದಂತೆ (ಅತಿ–ಸಣ್ಣ / ವಿಕೇಂದ್ರೀಕೃತ ವಲಯದ ಘಟಕಗಳಿಗೆ ಶೇಕಡ 3ಕ್ಕಿಂತ ಹೆಚ್ಚಿರದಂತೆ)

(v) ಆಕಸ್ಮಿಕ ಸಾಲ ನೆರವು. ದುಡಿಯುವ ಬಂಡವಾಳದ ನೆರವಿಗೆ ರಿಯಾಯಿತಿ ದರದ ಅನುಮತಿ

**7. ರಾಜ್ಯ ಮಟ್ಟದ ಅಂತರ್ ಸಾಂಸ್ಥಿಕ ಸಮಿತಿ**

ರೋಗಗ್ರಸ್ಥ ಸಣ್ಣ ಪ್ರಮಾಣದ ಉದ್ದಿಮೆಗಳ ಪುನರ್ವಸತಿಯಲ್ಲಿ ಸಮನ್ವಯತೆಯ ಕೊರತೆಯನ್ನು ನಿವಾರಿಸಲು ಎಲ್ಲ ರಾಜ್ಯಗಳಲ್ಲಿ ರಾಜ್ಯ ಮಟ್ಟದ ಅಂತರ್ ಸಾಂಸ್ಥಿಕ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಈ ಸಮಿತಿಗಳ ಸಭೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಗಳು ನಡೆಸುತ್ತವೆ ಮತ್ತು ಸಂಬಂಧಿಸಿದ ರಾಜ್ಯದ ಕೈಗಾರಿಕಾ ಕಾರ್ಯದರ್ಶಿಯವರು ಅದರ ಅಧ್ಯಕ್ಷತೆ ವಹಿಸುತ್ತಾರೆ. ರಾಜ್ಯ ಸರಕಾರಿ ಅಧಿಕಾರಿಗಳು ಮತ್ತು ರಾಜ್ಯ ಮಟ್ಟದ ಸಂಸ್ಥೆಗಳು ಒಂದೆಡೆ ಹಾಗೂ ಸಾಲ ನೀಡುವ ಸಂಸ್ಥೆಗಳು ಮತ್ತು ಬ್ಯಾಂಕುಗಳು ಇನ್ನೊಂದೆಡೆ ಇವುಗಳ ಮಧ್ಯೆ ಇದು ಸಂಪರ್ಕ ಸಾಧಿಸಲು ಉಪಯುಕ್ತ ವೇದಿಕೆಯಾಗಿ ಕೆಲಸಮಾಡುತ್ತದೆ. ರಾಜ್ಯಮಟ್ಟದ ಹಣಕಾಸು ಸಂಸ್ಥೆಗಳು ಅವಧಿ ಸಾಲ ಒದಗಿಸಿದ ಘಟಕಗಳಿಗೆ ಸಮಯಕ್ಕೆ ಸರಿಯಾಗಿ ದುಡಿಯುವ ಬಂಡವಾಳವನ್ನು

ಮಂಜೂರುಮಾಡುವಂತೆ, ರಾಜ್ಯ ಸರಕಾರದ ಮಾರ್ಜಿನ್ ಹಣದ ಯೋಜನೆಯಂತಹ ವಿಶೇಷ ಯೋಜನೆಗಳ ಅನುಷ್ಠಾನ, ಸಿಡ್ಬಿಯ ರಾಷ್ಟ್ರೀಯ ಈಕ್ವಿಟಿ ನಿಧಿ ಯೋಜನೆ ಇದು ನೋಡಿಕೊಳ್ಳುತ್ತದೆ ಮತ್ತು ಕೈಗಾರಿಕೆಗಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳನ್ನು ಮತ್ತು ಬ್ಯಾಂಕುಗಳು ಪೂರೈಸಿದ ಮಾಹಿತಿ ಆಧಾರದ ಮೇಲೆ ಸಣ್ಣ ಪ್ರಮಾಣದ ಉದ್ದಿಮೆಗಳ ರೋಗಲಕ್ಷಣಗಳನ್ನು ಪರಿಶೀಲನೆ ಮಾಡುತ್ತದೆ. ತ್ರೈಮಾಸಿಕವಾಗಿ ನಡೆಯುವ ರಾಜ್ಯ ಮಟ್ಟದ ಅಂತರ್ ಸಾಂಸ್ಥಿಕ ಸಮಿತಿಗಳ ಸಭೆಗಳಿಗೆ, ಇತರರೊಂದಿಗೆ ಸ್ಥಾನಿಕ ಸಣ್ಣ ಪ್ರಮಾಣದ ಉದ್ದಿಮೆ ಸಂಘಗಳ ಪ್ರತಿನಿಧಿಗಳನ್ನು ಆಹ್ವಾನಿಸಲಾಗುತ್ತದೆ. ರಾಜ್ಯ ಮಟ್ಟದ ಅಂತರ್ ಸಾಂಸ್ಥಿಕ ಸಮಿತಿಯ ಒಂದು ಉಪ–ಸಮಿತಿಯು ಪ್ರತೀ ರುಗ್ಣ ಸಣ್ಣ ಪ್ರಮಾಣದ ಉದ್ದಿಮೆ ಎದುರಿಸುತ್ತಿರುವ ಸಮಸ್ಯೆಗಳ ಕಡೆ ಗಮನ ಕೊಡುತ್ತದೆ ಮತ್ತು ರಾಜ್ಯ ಮಟ್ಟದ ಅಂತರ್ ಸಾಂಸ್ಥಿಕ ಸಮಿತಿಯ ವೇದಿಕೆಗೆ ಸಲಹೆ ನೀಡುತ್ತದೆ.

**8. ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಅಧಿಕೃತ ಸಮಿತಿ**

ಕೇಂದ್ರೀಯ ಆರ್ಥ ಸಚಿವರು ಮಾಡಿದ ಪ್ರಕಟಣೆಗಳ ಭಾಗವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ ಪ್ರತಿನಿಧಿಗಳು ಸಂಚಾಲಕರಾಗಿ, ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಹಣಕಾಸು ಒದಗಿಸುತ್ತಿರುವವರಲ್ಲಿ ದೊಡ್ಡ ಪಾಲುದಾರರಾಗಿರುವ ಎರಡು ಬ್ಯಾಂಕುಗಳ ವರಿಷ್ಠ ಅಧಿಕಾರಿಗಳು, ಸಿಡ್ಬಿ ಪ್ರಾಂತೀಯ ಕಚೇರಿಯ ಪ್ರತಿನಿಧಿಗಳು, ರಾಜ್ಯ ಸರಕಾರದ ಕೈಗಾರಿಕಾ ನಿರ್ದೇಶಕರು, ರಾಜ್ಯದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆ ಸಂಘಗಳ ಇಬ್ಬರು ವರಿಷ್ಠ ದರ್ಜೆ ಪ್ರತಿನಿಧಿಗಳು ಮತ್ತು ಒಬ್ಬ ರಾಜ್ಯ ಹಣಕಾಸು ಸಂಸ್ಥೆ / ರಾಜ್ಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿನ ಪ್ರತಿನಿಧಿ ಇವರು ಸದಸ್ಯರಾಗಿ, ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾಂತೀಯ ಕಚೇರಿಗಳಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಅಧಿಕೃತ ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಯು ಕಾಲಕಾಲಕ್ಕೆ ಸಭೆಯನ್ನು ನಡೆಸಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಹಣಕಾಸು ಒದಗಿಸುವಲ್ಲಿನ ಪ್ರಗತಿಯನ್ನು ಹಾಗೂ ರೋಗಗ್ರಸ್ಥ ಸಣ್ಣ ಪ್ರಮಾಣದ ಉದ್ದಿಮೆಗಳ ಪುನರ್ವಸತಿಯನ್ನು ಪರಾಮರ್ಷಿಸುತ್ತದೆ. ಈ ವಲಯಕ್ಕೆ ಸರಾಗವಾಗಿ ಉದ್ದರಿ ದೊರೆಯುವಂತಾಗುವಲ್ಲಿ ಎದುರಾಗುವ ಅಡಚಣೆಗಳನ್ನು ನಿವಾರಿಸಲು ಇತರ ಬ್ಯಾಂಕು/ ಹಣಕಾಸು ಸಂಸ್ಥೆಗಳು ಮತ್ತು ರಾಜ್ಯ ಸರಕಾರದ ಜೊತೆ ಸಮನ್ವಯತೆಯನ್ನು ಕಲ್ಪಿಸುತ್ತದೆ. ಈ ಸಮಿತಿಗಳು ಗುಂಪು / ಜಿಲ್ಲಾ ಮಟ್ಟದಲ್ಲಿ ಇದೇ ತೆರನಾದ ಸಮಿತಿಗಳನ್ನು ಹೊಂದುವ ಅಗತ್ಯದ ಬಗ್ಗೆ ನಿರ್ಧರಿಸುತ್ತವೆ.

**9. ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಸಾಲ ಮರುಹೊಂದಾಣಿಕೆ ವ್ಯವಸ್ಥೆ**

ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಹಣಕಾಸು ಹೆಚ್ಚಿಸುವ ಸಲುವಾಗಿ ಗೌರವಾನ್ವಿತ ಕೇಂದ್ರೀಯ ಆರ್ಥ ಸಚಿವರು ಮಾಡಿದ ಪ್ರಕಟಣೆಗಳ ಭಾಗವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಬ್ಯಾಕಿಂಗ್ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಇಲಾಖೆಯು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಸಾಲ ಮರುಹೊಂದಾಣಿಕೆ ವ್ಯವಸ್ಥೆಯನ್ನು ರಚಿಸಿ ತಾ. ಸಪ್ಟಂಬರ 8, 2005ರ ಸುತ್ತೋಲೆ ಸಂಖ್ಯೆ ಡಿಬಿಓಡಿ.ಬಿಪಿ.ಬಿಸಿ.ಸಂ. 34/21.04.132/2005–06 ಮೂಲಕ ಎಲ್ಲಾ ವಣಿಜ್ಯ ಬ್ಯಾಂಕುಗಳಿಗೆ ಸಲಹೆ ನೀಡಿತು. ಈ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಎಲ್ಲ ಅರ್ಹ ಸಾಲ ಮರುಹೊಂದಾಣಿಕೆ ಮಾಡುವುದಕ್ಕಾಗಿ ನೀಡಲಾಯಿತು. ಈ ಮಾರ್ಗದರ್ಶಿ ಸೂತ್ರಗಳು ಸಮರ್ಥ / ಸಂಭಾವ್ಯ ಸಾಮರ್ಥ್ಯವಿರುವ ಈ ಕೆಳಗೆ ಸೂಚಿಸಿದ ಘಟಕಗಳಿಗೆ ಅನ್ವಯವಾಗುತ್ತವೆ:

(ಎ) ಬ್ಯಾಂಕುಗಳಿಗೆ ಬಾಕಿ ಮಟ್ಟದಲ್ಲಿ ಭೇದವಿಲ್ಲದೆ ಎಲ್ಲ ಕಾರ್ಪೊರೇಟ್ ಅಲ್ಲದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು
(ಬಿ) ಬ್ಯಾಂಕುಗಳಿಗೆ ಬಾಕಿ ಮಟ್ಟದಲ್ಲಿ ಭೇದವಿಲ್ಲದೆ ಒಂದೇ ಬ್ಯಾಂಕ್‌ನಿಂದ ಬ್ಯಾಂಕಿಂಗ್ ಸವಲತ್ತುಗಳನ್ನು ಉಪಯೋಗಿಸುತ್ತಿರುವೆ ಎಲ್ಲ ಕಾರ್ಪೊರೇಟ್ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು
(ಸಿ) ವಿವಿಧ / ಒಕ್ಕೂಟದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಿಧಿ ಕಲ್ಪಿಸಿದ / ನಿಧಿ ಕಲ್ಪಿಸದ ರೂ. 10 ಕೋಟಿ ತನಕ ಬಾಕಿಯಿರುವ ಎಲ್ಲ ಕಾರ್ಪೊರೇಟ್ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು
(ಡಿ) ಉದ್ದೇಶಪೂರ್ವಕ ಬೇಪಾವತಿ, ವಂಚನೆ ಮತ್ತು ದುಷ್ಕೃತ್ಯಗಳನ್ನು ಹೊಂದಿರುವ ಖಾತೆಗಳು ಈ ಮಾರ್ಗದರ್ಶಿ ಸೂತ್ರಗಳ ಅಡಿಯಲ್ಲಿ ಮರುಹೊಂದಾಣಿಕೆ ಅರ್ಹವಾಗಿರುವುದಿಲ್ಲ.
(ಇ) 'ನಷ್ಟ ಆಸ್ತಿ'ಎಂದು ವರ್ಗೀಕರಣವಾಗಿರುವ ಖಾತೆಗಳು ಮರುಹೊಂದಾಣಿಕೆಗೆ ಅರ್ಹವಾಗಿರುವುದಿಲ್ಲ.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ನಿಧಿ ಕಲ್ಪಿಸಿದ / ನಿಧಿ ಕಲ್ಪಿಸದ ರೂ. 10 ಕೋಟಿಗೆ ಮೇಲ್ಪಟ್ಟು ಬಾಕಿಯಿರುವ ಎಲ್ಲ ಕಾರ್ಪೊರೇಟ್ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಬ್ಯಾಕಿಂಗ್ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಇಲಾಖೆಯು ತಾ. ನವೆಂಬರ್ 10, 2005ರ ಸುತ್ತೋಲೆ ಸಂಖ್ಯೆ ಡಿಬಿಓಡಿ.ಸಂ.ಬಿಪಿ.ಬಿಸಿ.45/21.04.132/2005–06ಯ ಮೂಲಕ ಪ್ರತ್ಯೇಕ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸಿದೆ.

**10. ಸಮೂಹ ಪ್ರಯತ್ನ**

ಸಣ್ಣ ಪ್ರಮಾಣದ ಉದ್ಯಮಗಳ ಅಭಿವೃದ್ಧಿಯನ್ನು ಕೇಂದ್ರೀಕರಿಸಿ ಭಾರತ ಸರಕಾರದ ಸಣ್ಣ ಪ್ರಮಾಣ ಉದ್ಯಮಗಳ ಸಚಿವಾಲಯವು 60 ಗುಂಪುಗಳನ್ನು ಗುರುತಿಸಿದೆ. ಭಾರತ ಸರಕಾರದ ಸಣ್ಣ ಪ್ರಮಾಣ ಉದ್ಯಮಗಳ ಸಚಿವಾಲಯವು ಗುರುತಿಸಿದ ಗುಂಪುಗಳ ಉದ್ಧರಿ ಅಗತ್ಯಗಳನ್ನು ತಮ್ಮ ವಾರ್ಷಿಕ ಉದ್ಧರಿ ಯೋಜನೆಯಲ್ಲಿ ಅಳಪಡಿಸಿಕ್ಕೊಳ್ಳುವಂತೆ ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ ಸಂಚಾಲಕರಾದ ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ.

ಪೂರ್ಣ ಸೇವಾ ಭಾವನೆಯಿಂದ ಸಣ್ಣ ಪ್ರಮಾಣದ ಉದ್ಯಮಗಳ ವಿಭಿನ್ನ ಅಗತ್ಯಗಳನ್ನು ಒದಗಿಸಲು ಮಾನ್ಯತೆ ಪಡೆದ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳ ಗುಂಪುಗಳಿಗೆ "4–ಅ"ಗಳ ಮಾರ್ಗಗಳಾದ ಗ್ರಾಹಕರ ಕೇಂದ್ರೀಕರಣ, ವೆಚ್ಚ ನಿಯಂತ್ರಣ, ಅಡ್ಡ ಮಾರಾಟ, ಸಂಭಾವ್ಯ ನಷ್ಟವನ್ನು ಹತೋಟಿಯಲ್ಲಿ ಇಡುವುದು ಇವುಗಳನ್ನು ಅಳವಡಿಸಿಕೊಳ್ಳಬೇಕೆಂದು ಗಂಗೂಲಿ ಸಮಿತಿ ಶಿಫಾರಸಿನನ್ವಯ ಬ್ಯಾಂಕುಗಳಿಗೆ ಸಲಹೆ ನೀಡಲಾಗಿದೆ. ಸಾಲ ನೀಡಲು ಗುಂಪು ಆಧರಿತ ಮಾರ್ಗವು ಹೆಚ್ಚು ಲಾಭಕರವಾಗಲು:

(i) ಸ್ಪಷ್ಟವಾಗಿ ಗೊತ್ತುಪಡಿಸಿದ ಮತ್ತು ಮಾನ್ಯತೆ ಪಡೆದ ಗುಂಪುಗಳ ಜೊತೆ ವ್ಯವಹರಿಸುವುದು
(ii) ಸಂಭಾವ್ಯ ನಷ್ಟ ಅಂದಾಜಿಸಲು ಸೂಕ್ತವಾದ ಮಾಹಿತಿ ಲಭ್ಯತೆ ಮತ್ತು
(iii) ಸಾಲ ನೀಡುವ ಸಂಸ್ಥೆಗಳಿಂದ ಮೇಲ್ವಿಚಾರಣೆ

ವ್ಯಾಪಾರ ದಾಖಲೆ, ಸ್ಪರ್ಧಾ ಭಾವನೆ ಮತ್ತು ಬೆಳವಣಿಗೆ ಸಾಧ್ಯತೆಯ ಅಧಾರದಲ್ಲಿ / ಅಥವಾ ಗುಂಪಿಗೆ ಸೂಕ್ತವಾದ ವಿವರಗಳ ಆಧಾರದಲ್ಲಿ ಗುಂಪುಗಳನ್ನು ಗುರುತಿಸಬಹುದು.

ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಹಣಕಾಸು ಒದಗಿಸಲು, ಗುಂಪು ಆಧರಿತ ಮಾರ್ಗ ವ್ಯವಹಾರದ ಖರ್ಚುಗಳನ್ನು ಕಡಿತಗೊಳಿಸುವ, ಸಂಭಾವ್ಯ ನಷ್ಟವನ್ನು ತಗ್ಗಿಸುವ ಅವಕಾಶಗಳು ಮತ್ತು ಸೂಕ್ತ ಮೂಲಭೂತ ಸೌಕರ್ಯಗಳ ಮಟ್ಟದಲ್ಲಿ ಹೆಚ್ಚಳಗಳ ಸಾಧ್ಯತೆಯನ್ನು ಹೆಚ್ಚಿಸುವುದರಿಂದ, ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಉದ್ದರಿಯನ್ನು ಹೆಚ್ಚಿಸಲು ಕೇಂದ್ರೀಯ ವಿತ್ತ ಸಚಿವಾಲಯವು ತನ್ನ ನೀತಿ ಪ್ರಸ್ತಾವದಲ್ಲಿ, ಬ್ಯಾಂಕುಗಳು ಇದಕ್ಕೆ ಒತ್ತು ನೀಡಬೇಕೆಂದು ಸೂಚನೆ ನೀಡಲಾಗಿದೆ. ಸಿಡ್ಬಿ(ಎಸ್.ಐ.ಡಿ.ಬಿ.ಐ)ಯು ಭಾರತೀಯ ಬ್ಯಾಂಕುಗಳ ಸಂಘವು ಸಹಯೋಗದೊಂದಿಗೆ, ಗುರುತಿಸಿದ ಪ್ರತಿಯೊಂದು ಗುಂಪುಗಳಲ್ಲಿ ಸಂಭಾವ್ಯ ನಷ್ಟದ ಬಗ್ಗೆ ಸಾಮಾನ್ಯವಾಗಿ ಎದುರಾಗುವ ವಾಸ್ತವ ಸಂಗತಿಗಳನ್ನು ಸಂಗ್ರಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತದೆ ಮತ್ತು ಸಣ್ಣ(ಕಿರು ಉದ್ಯಮ ಸೇರಿದಂತೆ) ಉದ್ಯಮಗಳಿಗೆ ಅಳವಡಿಕೆ, ಮೌಲ್ಯಮಾಪನ ಮತ್ತು ನಿಗಾವಹಿಸುವಿಕೆಗಾಗಿ ಮಾಹಿತಿ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುತ್ತದೆ. ಈ ಕ್ರಮವು ವ್ಯವಹಾರದ ವೆಚ್ಚಗಳಲ್ಲಿ ಕಡಿತ ಮತ್ತು ಗುಂಪುಗಳಲ್ಲಿರುವ ಸಣ್ಣ ಮತ್ತು ಕಿರು ಉದ್ಯಮಗಳಿಗೆ ಉದ್ದರಿ ಹರಿವು ಹೆಚ್ಚಳವಾಗುವುದನ್ನು ನಿರೀಕ್ಷಿಸಲಾಗಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಗುಂಪುಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಹಣಕಾಸಿನ ಆಯ್ಕೆಗಳನ್ನು ಹೆಚ್ಚಿಸಲು ಸಿಡ್ಬಿಯು ಹಕ್ಕುದಾರರೊಂದಿಗೆ ಸಮಾಲೋಚಿಸಿ ಕಾರ್ಯಯೋಜನೆಯನ್ನು ರಚಿಸುತ್ತದೆ.

## 11. ಸಣ್ಣ ಪ್ರಮಾಣದ ಉದ್ದಿಮೆ / ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಉದ್ದರಿ ಹರಿವಿನ ಬಗ್ಗೆ ಸಮಿತಿ

11.1 ಸಣ್ಣ ಪ್ರಮಾಣದ ಉದ್ಯಮಗಳಿಗೆ ಅಗತ್ಯ ಪ್ರಮಾಣದ ಉದ್ದರಿಯ ಹರಿವು ಮತ್ತು ಸಂಬಂಧಿಸಿದ ವಿಷಯಗಳ ಬಗ್ಗೆ ಪರಿಶೀಲನಾ ಸಮಿತಿಯ ವರದಿ(ನಾಯಕ್ ಸಮಿತಿ)

ಹಣಕಾಸನ್ನು ಪಡೆಯುವಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳು ಎದುರಿಸಬೇಕಾದ ಸಮಸ್ಯೆಗಳ ಬಗ್ಗೆ ಪರಿಶೀಲಿಸಲು, ಅಂದಿನ ಉಪ ಗವರ್ನರ್ ಶ್ರೀ ಪಿ.ಆರ್.ನಾಯಕ್ ಅವರ ಅಧ್ಯಕ್ಷತೆಯಲ್ಲಿ ರಿಸರ್ವ್ ಬ್ಯಾಂಕ್ ಡಿಸೆಂಬರ್ 1991 ರಲ್ಲಿ ಒಂದು ಸಮಿತಿಯನ್ನು ರಚಿಸಿತು. ಸಮಿತಿಯು ತನ್ನ ವರದಿಯನ್ನು 1992ರಲ್ಲಿ ಸಲ್ಲಿಸಿತು. ಸಮಿತಿಯು ಎಲ್ಲ ಮುಖ್ಯ ಶಿಫಾರಸುಗಳನ್ನು ಅಂಗೀಕರಿಸಿ ಇತರ ವಿಷಯಗಳೊಂದಿಗೆ ಬ್ಯಾಂಕುಗಳಿಗೆ ಈ ಕೆಳಗಿನಂತೆ ಸಲಹೆ ನೀಡಲಾಯಿತು:

(i) ಗ್ರಾಮೀಣ ಕೈಗಾರಿಕೆಗಳು, ಕಿರು ಉದ್ದಿಮೆಗಳು ಮತ್ತು ಇತರ ಸಣ್ಣ ಪ್ರಮಾಣದ ಉದ್ದಿಮೆಗಳು ಈ ಕ್ರಮಾಂಕದಲ್ಲಿ, ಸಣ್ಣ ಪ್ರಮಾಣದ ಉದ್ಯಮಗಳ ಹಣಕಾಸಿನ ಅಗತ್ಯಗಳನ್ನು ಪೂರೈಸುವಾಗ ಪ್ರಾಶಸ್ತ್ಯವನ್ನು ನೀಡಬೇಕು

(ii) ವೈಯಕ್ತಿಕ ಪ್ರಕರಣಗಳಲ್ಲಿ ರೂ. 2ಕೋಟಿಯವರೆಗೆ(ಈಗ ರೂ. 5ಕೋಟಿಗೆ ಹೆಚ್ಚಿಸಲಾಗಿದೆ) ಉದ್ದರಿ ಮಿತಿ ಹೊಂದಿರುವ ಸಣ್ಣ ಉದ್ದಿಮೆ ಘಟಕಗಳಿಗೆ ಅಂದಾಜುಮಾಡಿದ ವಾರ್ಷಿಕ ವಹಿವಾಟಿನ 20ಪ್ರತಿಶತ ಆಧಾರದಲ್ಲಿ ಲೆಕ್ಕಹಾಕಿ ದುಡಿಯುವ ಬಂಡವಾಳಕ್ಕಾಗಿ ಉದ್ದರಿ ಮಿತಿಯನ್ನು ಮಂಜೂರುಮಾಡುವುದು

(iii) ಸಣ್ಣ ಪ್ರಮಾಣದ ಉದ್ಯಮಗಳ ಸೂಕ್ತ ಅಗತ್ಯಗಳನ್ನು ಪೂರೈಸಲು ವಾರ್ಷಿಕ ಉದ್ದರಿ ಬಜೆಟನ್ನು 'ಬಾಟಂ ಅಪ್' ಪದ್ಧತಿಯಲ್ಲಿ ತಯಾರಿಸುವುದು

(iv) ಸಣ್ಣ ಪ್ರಮಾಣದ ಉದ್ಯಮಗಳ ಹಣಕಾಸಿನ (ದುಡಿಯುವ ಬಂಡವಾಳ ಮತ್ತು ಅವಧಿ ಸಾಲ ಸೇರಿದಂತೆ) ಅಗತ್ಯಗಳನ್ನು ಪೂರೈಸಲು ಸಿಡ್ಬಿಯ ಏಕ ಗವಾಕ್ಷಿ ಯೋಜನೆಯನ್ನು ಎಲ್ಲ ಜಿಲ್ಲೆಗಳಿಗೆ ವಿಸ್ತರಿಸುವುದು

(v) ಉದ್ದರಿಯ ಮಂಜೂರಾತಿ ಮತ್ತು ವಿತರಣೆಯಲ್ಲಿ ಯಾವುದೇ ವಿಳಂಬವಾಗದಂತೆ ನೋಡಿಕೊಳ್ಳಬೇಕು. ಸಾಲ ಪ್ರಸ್ತಾಪದ ಉದ್ದರಿ ಮಿತಿಯಲ್ಲಿ ಕಡಿತ / ಅಸ್ವೀಕಾರದ ಸಂದರ್ಭದಲ್ಲಿ ಅಂತಹ ಪ್ರಸ್ತಾಪವನ್ನು ಮೇಲಿನ ಅಧಿಕಾರಿಗಳಿಗೆ ಕಳುಹಿಸಬೇಕು

(vi) ಉದ್ದರಿ ಮಂಜೂರುಮಾಡಲು ಪ್ರತಿಫಲ ಸಿದ್ಧಾಂತದ ಪ್ರಕಾರ ಕಡ್ಡಾಯ ಠೇವಣಿಗೆ ಒತ್ತಾಯಿಸದಿರುವುದು

(vii) ಸಣ್ಣ ಉದ್ದಿಮೆಗಳ ಪರಿಣತ ಬ್ಯಾಂಕ್ ಶಾಖೆಗಳನ್ನು ತೆರೆಯುವುದು ಅಥವಾ ಸಾಕಷ್ಟು ಹೆಚ್ಚಿನ ಸಣ್ಣ ಉದ್ದಿಮೆ ಘಟಕಗಳ ಸಾಲ ಖಾತೆಗಳನ್ನು ಹೊಂದಿರುವ ಶಾಖೆಗಳನ್ನು ಸಣ್ಣ ಉದ್ದಿಮೆಗಳ ಪರಿಣತ ಬ್ಯಾಂಕ್ ಶಾಖೆಗಳಾಗಿ ಮಾರ್ಪಡಿಸುವುದು

(viii) ರುಗ್ಣ ಸಣ್ಣ ಉದ್ದಿಮೆ ಘಟಕಗಳನ್ನು ಗುರುತಿಸಿ ಅವುಗಳನ್ನು ಶುಶ್ರೂಷೆಗೊಳಪಡಿಸುವುದು

(ix) ಸಣ್ಣ ಉದ್ದಿಮೆ ಘಟಕಗಳ ಸಾಲ ಅರ್ಜಿ ನಮೂನೆಗಳನ್ನು ಪ್ರಮಾಣೀಕರಿಸುವುದು ಮತ್ತು

(x) ಪರಿಣತ ಬ್ಯಾಂಕ್ ಶಾಖೆಗಳಲ್ಲಿ ಕೆಲಸಮಾಡುವ ಸಿಬ್ಬಂದಿಯ ಮನೋಭಾವದಲ್ಲಿ ಬದಲಾವಣೆಯನ್ನು ತರಲು ತರಬೇತಿ ನೀಡುವುದು

**11.2 ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಉದ್ದರಿ ಬಗ್ಗೆ ಉನ್ನತ ದರ್ಜೆ ಸಮಿತಿ ವರದಿ(ಕಪೂರ್ ಸಮಿತಿ)**

ಸಣ್ಣ ಪ್ರಮಾಣದ ಉದ್ಯಮಗಳಿಗೆ ಉದ್ದರಿ ಬಟವಾಡೆ ಪದ್ಧತಿಯನ್ನು ಉತ್ತಮಪಡಿಸಲು ಮತ್ತು ಕಾರ್ಯವಿಧಾನಗಳ ಸರಳೀಕರಣದ ಮಾರ್ಗಸೂಚಿಸಲು ಶ್ರೀ ಎಸ್.ಎಲ್. ಕಪೂರ್(ಐ.ಎ.ಎಸ್. ನಿವೃತ್ತ), ಹಿಂದಿನ ಕಾರ್ಯದರ್ಶಿ, ಭಾರತ ಸರಕಾರದ ಕೈಗಾರಿಕಾ ಸಚಿವಾಲಯ, ಇವರ ಅಧ್ಯಕ್ಷತೆಯಲ್ಲಿ ಏಕಸದಸ್ಯ ಉನ್ನತ ದರ್ಜೆ ಸಮಿತಿಯನ್ನು ರಿಸರ್ವ್ ಬ್ಯಾಂಕ್ ನೇಮಿಸಿತು. ಸಮಿತಿಯು ಸಣ್ಣ ಪ್ರಮಾಣದ ಉದ್ದಿಮೆಗಳ ಹಣಕಾಸಿಗೆ ಸಂಬಂಧಿಸಿದಂತೆ ಹಲವು ವಿಶಯಗಳ ಬಗ್ಗೆ 126 ಶಿಫಾರಸುಗಳನ್ನು ಮಾಡಿತು. ರಿಸರ್ವ್ ಬ್ಯಾಂಕು ಈ ಶಿಫಾರಸುಗಳನ್ನು ಪರಿಶೀಲಿಸಿ ಅವುಗಳಲ್ಲಿ 88 ಶಿಫಾರಸುಗಳನ್ನು ಅಂಗೀಕರಿಸಿತು ಮತ್ತು ಪ್ರಾಮುಖ್ಯವಾಗಿ ಅಂಗೀಕರಿಸಿದ ಶಿಫಾರಸುಗಳಲ್ಲಿ ಈ ಕೆಳಗಿನವು ಸೇರಿವೆ:

(i) ತಾತ್ಕಾಲಿಕ ಮಿತಿ ಮಂಜೂರುಮಾಡಲು ಶಾಖಾ ನಿರ್ವಾಹಕರಿಗೆ ಅಧಿಕಾರ ನೀಡಿಕೆ

(ii) ಅರ್ಜಿಗಳ ಸರಳೀಕರಣ

(iii) ಉದ್ದರಿ ಅಗತ್ಯತೆಗಳನ್ನು ನಿರ್ಧರಿಸಲು ಬ್ಯಾಂಕುಗಳಿಗೆ ತಮ್ಮದೇ ಕಾರ್ಯವಿಧಾನವನ್ನು ಅಳವಡಿಸಲು ಸ್ವಾತಂತ್ರ್ಯ

(iv) ಸಣ್ಣ ಉದ್ದಿಮೆಗಳ ಪರಿಣತ ಬ್ಯಾಂಕ್ ಶಾಖೆಗಳನ್ನು ಹೆಚ್ಚಾಗಿ ತೆರೆಯುವುದು

(v) ಸಂಯುಕ್ತ ಸಾಲದ ಮಿತಿಯನ್ನು ರೂ. 5 ಲಕ್ಷಕ್ಕೆ ಹೆಚ್ಚಿಸುವುದು(ರೂ. 1ಕೋಟಿಗೆ ಹೆಚ್ಚಿಸಲಾಗಿದೆ)

(vi) ವಸೂಲಾತಿ ಯಂತ್ರವನ್ನು ಶಕ್ತಿಯುತಗೊಳಿಸುವುದು

(vii) ಹಿಂದುಳಿದ ರಾಜ್ಯಗಳಿಗೆ ಬ್ಯಾಂಕುಗಳು ಹೆಚ್ಚಿನ ಗಮನವನ್ನು ನೀಡುವುದು

(viii) ಸಣ್ಣ ಯೋಜನೆ ಮೌಲ್ಯ ನಿರ್ಣಯ ಮಾಡಲು ಶಾಖಾ ವ್ಯವಸ್ಥಾಪಕರಿಗೆ ವಿಶೇಷ ತರಬೇತಿ ಯೋಜನೆ

(ix) ಬ್ಯಾಂಕುಗಳು ಗ್ರಾಹಕರ ದೂರು ನಿರ್ವಹಣ ಯಂತ್ರವನ್ನು ಹೆಚ್ಚು ಪಾರದರ್ಶಕವಾಗಿ ಮಾಡಬೇಕು ಮತ್ತು ದೂರುಗಳ ನಿರ್ವಹಣಾ ಪದ್ಧತಿ ಮತ್ತು ಮೇಲ್ವಿಚಾರಣೆಯನ್ನು ಸರಳೀಕರಿಸಬೇಕು

**11.3 ಸಣ್ಣ ಪ್ರಮಾಣದ ಉದ್ದಿಮೆಗಳ ವಲಯಕ್ಕೆ ಉದ್ದರಿ ಹರಿವಿನ ಬಗ್ಗೆ ಕಾರ್ಯ ಪಡೆ ವರದಿ(ಗಂಗೂಲಿ ಸಮಿತಿ)**

ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಅವರು ತಮ್ಮ 2003–2004ರ ಹಣಕಾಸು ಮತ್ತು ಉದ್ದರಿ ನೀತಿಯ ಮಧ್ಯಕಾಲೀನ ಸಮೀಕ್ಷೆಯಲ್ಲಿ ಘೋಷಿಸಿದಂತೆ ಡಾ. ಎ.ಎಸ್. ಗಂಗೂಲಿಯವರ ಅಧ್ಯಕ್ಷತೆಯಲ್ಲಿ 'ಸಣ್ಣ ಉದ್ದಿಮೆಗಳ ವಲಯಕ್ಕೆ ಉದ್ದರಿ ಹರಿವಿನ ಬಗ್ಗೆ ಕಾರ್ಯಪಡೆ'ಯನ್ನು ರಚಿಸಿತು.

ಸಮಿತಿಯು ಸಣ್ಣ ಪ್ರಮಾಣದ ಉದ್ದಿಮೆಗಳ ಹಣಕಾಸಿಗೆ ಸಂಬಂಧಿಸಿದಂತೆ ಹಲವು ವಿಷಯಗಳ ಬಗ್ಗೆ 31 ಶಿಫಾರಸುಗಳನ್ನು ಮಾಡಿತು. ರಿಸರ್ವ್ ಬ್ಯಾಂಕ್ ಮತ್ತು ಬ್ಯಾಂಕುಗಳಿಗೆ ಸಂಬಂಧಿಸಿದ ಶಿಫಾರಸುಗಳನ್ನು ಪರಿಶೀಲಿಸಿತು ಮತ್ತು ಅವುಗಳಲ್ಲಿ ಈ ತನಕ 8 ಶಿಫಾರಸುಗಳನ್ನು ಕಾರ್ಯಾಗತ ಮಾಡುವುದಕ್ಕಾಗಿ ಅಂಗೀಕರಿಸಿತು. ಅವುಗಳು ಈ ಕೆಳಗಿನಂತಿವೆ:

(i) ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ಗುಂಪು ಆಧಾರಿತ ದೃಷ್ಟಿಕೋನವನ್ನು ಅಳವಡಿಸುವುದು

(ii) ನಿರ್ದಿಷ್ಟ ಯೋಜನೆಗಳ ಪ್ರಾಯೋಜನೆ ಹಾಗೂ ಮಾದರಿ ಯಶಸ್ವಿ ಕಾರ್ಯಕಾರಿ ಸರಕಾರೇತರ ಸಂಸ್ಥೆಗಳ ಪ್ರಚಾರವನ್ನು ಸಣ್ಣ ಮತ್ತು ಕಿರು ಉದ್ದಿಮೆ ಮತ್ತು ವೈಯಕ್ತಿಕ ಉದ್ದಿಮೆದಾರರಿಗೆ ಸೇವೆ ನೀಡುತ್ತಿರುವ ಮಾರ್ಗದರ್ಶಿ ಬ್ಯಾಂಕ್‌ಗಳು ಮಾಡಬೇಕು.

(iii) ಈಶಾನ್ಯ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ಯಾಂಕುಗಳು, ಗುಡ್ಡಗಾಡು ಪ್ರದೇಶದ ವಿಶಿಷ್ಟ ಪರಿಸ್ಥಿತಿಯನ್ನು ಮತ್ತು ಆಗಾಗ ಉಂಟಾಗುತ್ತಿರುವ ನೆರೆ ಹಾವಳಿಯಿಂದ ಸಾರಿಗೆ ವ್ಯವಸ್ಥೆಯಲ್ಲಿನ ಅಡೆತಡೆಗಳನ್ನು ಪರಿಗಣಿಸಿ ವಾಣಿಜ್ಯ ದೃಷ್ಟಿಯಿಂದ ನಿರ್ಧಾರಿಸಿ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಹೆಚ್ಚುವರಿ ದುಡಿಯುವ ಬಂಡವಾಳ ಮಂಜೂರುಮಾಡುವುದು.

(iv) ಗ್ರಾಮೀಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು ಮತ್ತು ಗ್ರಾಮೀಣ ಕುಶಲಕರ್ಮಿಗಳು, ಗ್ರಾಮೀಣ ಕೈಗಾರಿಕೆಗಳು ಮತ್ತು ಗ್ರಾಮೀಣ ಉದ್ದಿಮೆದಾರರಿಗೆ ಉದ್ದರಿ ಹರಿವನ್ನು ಹೆಚ್ಚಿಸುವುದು

(ು) ಆದ್ಯತಾ ವಲಯ ಸಾಲದ ಕೊರತೆಗಾಗಿ ವಿದೇಶಿ ಬ್ಯಾಂಕುಗಳು ಸಿಡ್ಬಿಯಲ್ಲಿ ಇಟ್ಟ ಠೇವಣಿಯ ಅವಧಿ ಮತ್ತು ಬಡ್ಡಿದರಗಳ ಪರಿಷ್ಕರಣೆ

**11.4 ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಉದ್ದರಿ ಹರಿವಿನ ಮಾರ್ಗದರ್ಶನ ಸೂತ್ರಗಳ ಪರಿಷ್ಕರಣೆ ಬಗ್ಗೆ ಆಂತರಿಕ ತಂಡ**

ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಕಚೇರಿಯ ಗ್ರಾಮೀಣ ಯೋಜನೆ ಮತ್ತು ಉದ್ದರಿ ಇಲಾಖೆಯ ಪ್ರಭಾರಿ ಮುಖ್ಯ ಮಹಾ ವ್ಯವಸ್ಥಾಪಕರಾದ ಶ್ರೀ ಸಿ.ಎಸ್. ಮೂರ್ತಿಯವರ ಅಧ್ಯಕ್ಷತೆಯಲ್ಲಿ, ಇತರ ವಿಷಯಗಳ ಜೊತೆ, ಸಣ್ಣ ಉದ್ಯಮ ವಲಯಕ್ಕೆ ಹಣಕಾಸಿನ ಬಗ್ಗೆ ರಿಸರ್ವ್ ಬ್ಯಾಂಕ್ ಈ ಹಿಂದೆ ಹೊರಡಿಸಿದ ಸುತ್ತೋಲೆಗಳು ಮತ್ತು ಮಾರ್ಗದರ್ಶನ ಸೂತ್ರಗಳ ಪರಿಷ್ಕರಣೆ ಬಗ್ಗೆ, ಸಣ್ಣ ಉದ್ಯಮ / ಸಣ್ಣ ಮತ್ತು ಮಧ್ಯಮ ಉದ್ಯಮ ವಲಯದ ಸಾಲ ಖಾತೆಗಳ ಪುನರ್ರಚನೆಗೆ

ಸೂಕ್ತ ನಿಯಮಗಳನ್ನು ಸೂಚಿಸಲು ಮತ್ತು ರುಗ್ಣ ಸಣ್ಣ ಪ್ರಮಾಣದ ಉದ್ಯಮಗಳ ಶುಶ್ರೂಷೆಗಾಗಿ ರಿಸರ್ವ್ ಬ್ಯಾಂಕ್ ನೀಡಿದ ಮಾರ್ಗದರ್ಶಿ ಸೂತ್ರಗಳನ್ನು ಪರಿಶೀಲಿಸಿ ಅಗತ್ಯ ಸಡಿಲಿಕೆ ಮತ್ತು ಉದಾರೀಕರಣವನ್ನು ಸೂಚಿಸುವುದಕ್ಕಾಗಿ ಆಂತರಿಕ ತಂಡವನ್ನು ರಚಿಸಲಾಯಿತು. ತಂಡವು ಜೂನ್ 6, 2005ರಂದು ತನ್ನ ವರದಿಯನ್ನು ಸಲ್ಲಿಸಿತು. ಆಂತರಿಕ ತಂಡ ಈ ಕೆಳಗಿನಂತೆ ಶಿಫಾರಸು ಮಾಡಿತು:

(i) ಸಣ್ಣ ಉದ್ಯಮ ವಲಯ ಮತ್ತು ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಹಣಕಾಸು ನೀಡಿಕೆಯ ಪ್ರಗತಿಯನ್ನು ಕಾಲಕಾಲಕ್ಕೆ ಪರಾಮರ್ಶಿಸಲು ಮತ್ತು ಈ ವಲಯಕ್ಕೆ ಉದ್ದರಿಯ ಸುಗಮ ಹರಿವಿಕೆಗೆ ಬರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಬೇರೆ ಬ್ಯಾಂಕು / ಹಣಕಾಸು ಸಂಸ್ಥೆಗಳು ಮತ್ತು ರಾಜ್ಯ ಸರಕಾರಗಳ ಜೊತೆ ಸಮನ್ವಯ ಸಾಧಿಸಲು ಭಾರತೀಯ ರಿಸರ್ವ್ ಬ್ಯಾಂಕಿನ ಪ್ರದೇಶಿಕ ಕಚೇರಿಯಲ್ಲಿ ಉನ್ನತಾಧಿಕಾರ ಸಮಿತಿಗಳನ್ನು ರಚಿಸುವುದು

(ii) ಸಣ್ಣ ಉದ್ಯಮ ವಲಯ ಮತ್ತು ಮಧ್ಯಮ ವಲಯದ ಮೇಲುಗೈಯಿರುವ ಪ್ರದೇಶದ ಉದ್ದಿಮೆದಾರರಿಗೆ ಬ್ಯಾಂಕ್ ಉದ್ದರಿ ಸುಲಭವಾಗಿ ದೊರೆಯುವಂತಾಗಲು ಗುರುತಿಸಿದ ಗುಂಪು / ಕೇಂದ್ರಗಳಲ್ಲಿ ಸಣ್ಣ ಮತ್ತು ಮಧ್ಯಮ ಉದ್ದಿಮೆ ವಿಶಿಷ್ಟ ಶಾಖೆಗಳನ್ನು ತೆರೆಯುವುದು ಮತ್ತು ಅಲ್ಲಿನ ಉದ್ಯೋಗಿಗಳು ಅಗತ್ಯ ಪರಿಣತಿ ಆರ್ಜಿಸಿಕೊಳ್ಳಲು ಅಣಿಮಾಡಿಕೊಳ್ಳುವುದು

(iii) ನಿರ್ದಿಷ್ಟ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿ ಒಳಪಟ್ಟು ಸಣ್ಣ ಮತ್ತು ಮಧ್ಯಮ ಉದ್ಯಮ ವಲಯದ ಖಾತೆಗಳ ಪುನರ್ರಚನೆಗೆ ಸಂಬಂಧಿಸಿದ ನೀತಿಗಳನ್ನು ನಿರೂಪಿಸಲು ಮಡಲಿಗಳಿಗೆ ಅಧಿಕಾರನೀಡಲು ಸಲಹೆ ನೀಡಲಾಗಿದೆ. ಬಹುಮುಖ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ರೂ. 10ಕೋಟಿ ಅಥವಾ ಹೆಚ್ಚು ಒಟ್ಟು ಉದ್ದರಿ ಮಿತಿಯಿರುವ ಕಾರ್ಪೊರೇಟ್ ಸಣ್ಣ ಉದ್ಯಮ ಮತ್ತು ಮಧ್ಯಮ ಉದ್ಯಮ ವಲಯ ಸಾಲಗಾರರ ಖಾತೆಗಳು ಸಿಡಿಆರ್ (CDR) ವ್ಯವಸ್ಥೆಯಡಿ ಪುನರ್ರಚನೆಗಾಗಿ ಒಳಗೊಂಡಿರುತ್ತವೆ.

(iv) ರುಗ್ಣ ಸಣ್ಣ ಉದ್ಯಮಗಳ ಬಗ್ಗೆ ವ್ಯಾಖ್ಯಾನ ಚಾಲ್ತಿಯಲ್ಲಿರುವ ಮಾರ್ಗದರ್ಶಿ ಸೂತ್ರಗಳ ಅಡಿಯಲ್ಲಿ ಮುಂದುವರಿಸಲು ಸಲಹೆನೀಡುತ್ತಾ ತಂಡ, ರುಗ್ಣ ಸಣ್ಣ ಉದ್ಯಮಗಳಿಗೆ ಒದಗಿಸಬೇಕಾದ ಪರಿಹಾರ ಮತ್ತು ರಿಯಾಯತಿ ಬಗ್ಗೆ ರಿಸರ್ವ್ ಬ್ಯಾಂಕ್ ಸೂಚಿಸಿದ ಮಾನದಂಡಗಳು ಮತ್ತು ಸುಲಭ ಸಾಧ್ಯವಾದ ಇತರ ಎಲ್ಲ ಸೂಚನೆಗಳನ್ನು ಹಿಂಪಡೆದು ಭ್ಯಾಂಕುಗಳು, ತಮ್ಮ ಮಂಡಳಿಯ ಅನುಮತಿಯೊಂದಿಗೆ ನಿಯಮಗಳನ್ನು ರೂಪಿಸಲು ಸ್ವಾತಂತ್ರ್ಯವಿರಬೇಕು.

ತಂಡದ ಬಹು ಸಂಖ್ಯೆಯ ಸಲಹೆಗಳನ್ನು, ಭಾರತ ಸರಕಾರವು ಒಪ್ಪಿ ಸಣ್ಣ ಮತ್ತು ಮಧ್ಯಮ ಉದ್ಯಮ ವಲಯದ ಉದ್ದರಿ ಹೆಚ್ಚಿಸಲು ನೀತಿ ಪ್ಯಾಕೇಜ್‌ನಲ್ಲಿ ಕೇಂದ್ರೀಯ ವಿತ್ತ ಸಚಿವಾಲಯ ಅಳವಡಿಸಿಕೊಂಡಿತು.

## 12. ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ಉದ್ದರಿ ಹೆಚ್ಚಳಕ್ಕಾಗಿ ಕೇಂದ್ರೀಯ ವಿತ್ತ ಸಚಿವಾಲಯ ಘೋಷಿಸಿದ ಪಾಲಿಸಿ ಪ್ಯಾಕೇಜ್

ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ಉದ್ದರಿ ಹೆಚ್ಚಿಸಲು ಪಾಲಿಸಿ ಪ್ಯಾಕೇಜ್‌ನಲ್ಲಿ ಕೇಂದ್ರೀಯ ವಿತ್ತ ಸಚಿವಾಲಯ ಪ್ರತ್ಯೇಕವಾಗಿ ಎರಡು ಸುತ್ತೋಲೆಗಳನ್ನು, ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಗೆ(ಆರ್.ಪಿ.ಸಿ.ಡಿ. ಪಿ.ಎಲ್.ಎನ್.ಎಫ್.ಎಸ್. ಬಿಸಿ. ಸಂ. 31/06.02.31/2005–06 ದಿನಾಂಕ ಆಗಸ್ಟ್. 19, 2005) ಮತ್ತು ಖಾಸಗಿ, ವಿದೇಶಿ ಮತ್ತು ಗ್ರಾಮೀಣ ಬ್ಯಾಂಕುಗಳಿಗೆ (ಆರ್.ಪಿ.ಸಿ.ಡಿ. ಪಿ.ಎಲ್.ಎನ್.ಎಫ್.ಎಸ್. ಬಿಸಿ. ಸಂ. 35/06.02.31/2005–06 ದಿನಾಂಕ ಆಗಸ್ಟ್.

25, 2005) ಕಾರ್ಯಗತಗೊಳಿಸಲು ಹೊರಡಿಸಿತು. ಪಾಲಿಸಿ ಪ್ಯಾಕೇಜ್‌ನ ಕೆಲವು ಲಕ್ಷಣಗಳು ಈ ಕೆಳಗಿನಂತಿವೆ:

- ಸಣ್ಣ ಮತ್ತು ಮಧ್ಯಮ ಉದ್ಯಮ ವಲಯದ ವ್ಯಾಖ್ಯೆ
- ಬ್ಯಾಂಕುಗಳಿಂದ ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ಹಣಕಾಸಿನ ಸ್ವಂತ–ಗುರಿಗಳ ನಿಗದಿ
- ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ನ್ಯಾಯಸಮ್ಮತ ಸಾಲದ ಬೆಲೆ ನಿಗದಿಗೆ ಕ್ರಮಗಳು
- ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ಔಪಚಾರಿಕ ಉದ್ದರಿ ವ್ಯಾಪ್ತಿ ಹೆಚ್ಚಿಸಲು ಕ್ರಮಗಳು
- ಸಣ್ಣ ಮತ್ತು ಮಧ್ಯಮ ಉದ್ಯಮ ವಲಯದ ಸಾಲನೀಡಿಕೆಗಾಗಿ ಗುಂಪು ಆಧಾರಿತ ಕ್ರಮಗಳು
- ಸಣ್ಣ ಮತ್ತು ಮಧ್ಯಮ ಉದ್ಯಮ ವಲಯ
- ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಯಲ್ಲಿ ಉನ್ನತಾಧಿಕಾರ ಸಮಿತಿಗಳನ್ನು ರಚಿಸುವುದು
- ಉದ್ದರಿ ಬೆಲೆಯನ್ನು ಘಟಕದ ಉದ್ದರಿ ಸಾಮರ್ಥ್ಯ ನಿರ್ಧರಣೆಗೆ ತಳುಕುಹಾಕುವ ಮೂಲಕ ಸಣ್ಣ ಮತ್ತು ಮಧ್ಯಮ ಉದ್ಯಮ ವಲಯಕ್ಕೆ ನ್ಯಾಯಸಮ್ಮತ ಸಾಲದ ಬೆಲೆ ನಿಗದಿಗೆ ಪಾರದರ್ಶಕತೆ ಬರುವಂತೆ ಕ್ರಮ ಕೈಗೊಳ್ಳುವುದು
- ಬ್ಯಾಂಕುಗಳು ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯದ ಯೋಜನೆಗಳ ಮೌಲ್ಯಮಾಪನಕ್ಕಾಗಿ ಸಿಡ್ಬಿಯು ವ್ಯವಹಾರದ ವೆಚ್ಚಗಳನ್ನು ಕಡಿಮೆಮಾಡಲು ಅಭಿವೃದ್ಧಿಪಡಿಸಿದ ಉದ್ದರಿ ಮೌಲ್ಯಮಾಪನ ಮತ್ತು ಶ್ರೇಣಿ ನಿರ್ಧರಣೆ ಸಾಧನ(ಸಿಎಆರ್‌ಟಿ), ಸಂಭಾವ್ಯ ನಷ್ಟ ನಿರ್ಧರಣೆ ಮಾದರಿ(ಆರ್‌ಎಎಂ) ಮತ್ತು ವಿಸ್ತಾರವಾದ ಶ್ರೇಣಿ ನಿರ್ಧರಣೆ ಮಾದರಿಗಳ ಲಾಭ ಪಡೆಯುವುದನ್ನು ಪರಿಗಣಿಸಬೇಕು
- ಬ್ಯಾಂಕುಗಳು ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಕಾರ್ಪೊರೇಶನ್ ಪರಿಚಯಿಸಿದ ಉದ್ದರಿ ಶ್ರೇಣಿ ನಿರ್ಧರಣೆ ಯೋಜನೆಯ ಅಡಿಯಲ್ಲಿ ಹೆಸರಾಂತ ಶ್ರೇಣಿ ನಿರ್ಧರಣೆ ದಲ್ಲಾಳಿ ಸಂಸ್ಥೆಯಿಂದ ಸಣ್ಣ ಉದ್ದಿಮೆಗಳ ಶ್ರೇಣಿ ನಿರ್ಧರಣೆ ಮಾಡುವುದನ್ನು ಪರಿಗಣಿಸಬೇಕು
- ಬ್ಯಾಂಕುಗಳ ಮಂಡಳಿಗಳು ಸಿದ್ಧಪಡಿಸಿದ ಹಾಗೂ ರಿಸರ್ವ್ ಬ್ಯಾಂಕು ನೀಡಿದ ಮಾರ್ಗದರ್ಶಿ ಸೂತ್ರಗಳನ್ನು ಬ್ಯಾಂಕುಗಳು ತಮ್ಮ ವೆಬ್ ತಾಣ ಹಾಗೂ ಸಿಡ್ಬಿಯ ವೆಬ್ ತಾಣ ಮತ್ತು ಶಾಖೆಗಳಲ್ಲಿ ಗಮನ ಸೆಳೆಯುವಂತೆ ಪ್ರದರ್ಶಿಸುವ ಮೂಲಕ ನೀತಿ ಮಾರ್ಗದರ್ಶಿ ಸೂತ್ರಗಳನ್ನು ವ್ಯಾಪಕವಾಗಿ ಪ್ರಚಾರಮಾಡಬೇಕು ಮತ್ತು ಸುಲಭವಾಗಿ ದೊರೆಯುವಂತೆ ಮಾಡಬೇಕು
- ಕೇಂದ್ರೀಯ ವಿತ್ತ ಮಂತ್ರಿಯವರು ಸಂಸತ್ತಿನಲ್ಲಿ ಅಗಸ್ಟ್ 10, 2005ರಂದು 'ಸಣ್ಣ ಮತ್ತು ಮಧ್ಯಮ ಉದ್ದಿಮೆ ವಲಯಕ್ಕೆ ಉದ್ದರಿ ಹೆಚ್ಚಿಸಲು' ಘೋಷಣೆ ಮಾಡಿದ ಪಾಲಿಸಿ ಪ್ಯಾಕೇಜ್‌ನ ಪ್ರತಿಯನ್ನು ಅನುಬಂಧ IV ರಲ್ಲಿ ನೀಡಲಾಗಿದೆ.

**13. ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ (ಎಮ್.ಎಸ್.ಎಮ್.ಇ.ಡಿ) ಕಾಯಿದೆ 2006**

ಭಾರತ ಸರಕಾರವು ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮ ಅಭಿವೃದ್ಧಿ ಕಾಯಿದೆ, 2006ನ್ನು ತಾ. ಜೂನ್ 16, 2006 ರಂದು ಶಾಸನ ಮಾಡಲಾಯಿತು ಮತ್ತು ಇದನ್ನು ತಾ. ಅಕ್ಟೋಬರ್ 2, 2006 ರಂದು ಪ್ರಕಟಿಸಲಾಯಿತು. ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮ ಅಭಿವೃದ್ಧಿ ಕಾಯಿದೆ, 2006ರ ಪ್ರಕಟಣೆಯೊಂದಿಗೆ ತಯಾರಿ ಅಥವಾ ಉತ್ಪಾದನೆ ಮತ್ತು ಸೇವೆಗಳನ್ನು ಒದಗಿಸುತ್ತಿರುವ ಅಥವಾ

ಸಲ್ಲಿಸುತ್ತಿರುವ ಕಿರು, ಸಣ್ಣ ಮತ್ತು ಮಧ್ಯಮ ಉದ್ಯಮಗಳ ವ್ಯಾಖ್ಯಾನವನ್ನು ಮಾರ್ಪಡಿಸಲಾಯಿತು ಮತ್ತು ಬ್ಯಾಂಕುಗಳು ದಿನಾಂಕ ಎಪ್ರೀಲ್ 4, 2007ರ ಸುತ್ತೋಲೆ ಆರ್.ಪಿ.ಸಿ.ಡಿ. ಪಿ.ಎಲ್.ಎನ್.ಎಫ್.ಎಸ್. ಬಿಸಿ. ಸಂ. 63/06.02.31/2006–07 ರಲ್ಲಿ ಸೂಚಿಸಿದಂತೆ ಇತರ ಕಾರ್ಯನೀತಿಗಳೊಂದಿಗೆ ಜಾರಿಗೊಳಿಸಬೇಕು.

**ಸಣ್ಣ ಕೈಗಾರಿಕೆಗಳ ಸಚಿವಾಲಯ**
**ಅಧಿಸೂಚನೆ**
**ನವ ದೆಹಲಿ, 5ನೇ ಅಕ್ಟೋಬರ್, 2006**

ಎಸ್.ಒ 1722/(ಇ) – 2006ರ ಉಪಪ್ರಕರಣ(1) ತಿಳಿಸಿದ ಕಾಯಿದೆಯಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿ, ಕೇಂದ್ರ ಸರಕಾರ ಕಾಯಿದೆಯ ಕಲಮು 7(1)(ಎ)ನಲ್ಲಿ ತಿಳಿಸಿದ ಉದ್ದಿಮೆಗಳ ಕಾರ್ಖಾನೆ ಮತ್ತು ಯಂತ್ರಗಳಲ್ಲಿ ಮಾಡಿದ ಹೂಡಿಕೆಯನ್ನು ಲೆಕ್ಕಹಾಕುವಾಗ ಈ ಕೆಳಗೆ ಸೂಚಿಸಿದವುಗಳಲ್ಲಿ ಮಾಡಿದ ಖರ್ಚುಗಳನ್ನು ಪರಿಗಣಿಸಬಾರದು:

(i) ಎರಕ, ಅಚ್ಚು, ಜಿಗ್‌ಗಳು, ಉಪಕರಣಗಳು, ನಿರ್ವಹಣೆಗಾಗಿರುವ ಬಿಡಿಭಾಗಗಳು ಮತ್ತು ಗ್ರಾಹಕ ಬಳಕೆಯ ಖರ್ಚು ಮುಂತಾದ ಸಾಧನಗಳು

(ii) ಕಾರ್ಖಾನೆ ಮತ್ತು ಯಂತ್ರಗಳನ್ನು ಅಳವಡಿಸುವುದು

(iii) ಸಂಶೋಧನೆ ಮತ್ತು ಅಭಿವೃದ್ಧಿ ಉಪಕರಣಗಳು ಮತ್ತು ಮಾಲಿನ್ಯ ನಿಯಂತ್ರಣ ಉಪಕರಣಗಳು

(iv) ವಿದ್ಯುತ್ ಉತ್ಪಾದನಾ ಉಪಕರಣ ಮತ್ತು ರಾಜ್ಯ ವಿದ್ಯುತ್ ಮಂಡಳಿಯ ನಿಯಮದಂತೆ ಉದ್ದಿಮೆ ಅಳವಡಿಸಿದ ಹೆಚ್ಚುವರಿ ವಿದ್ಯುತ್ ಪರಿವರ್ತಕ

(v) ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಮತ್ತು ರಾಜ್ಯ ಸಣ್ಣ ಕೈಗಾರಿಕಾ ನಿಗಮಕ್ಕೆ ಪಾವತಿ ಮಾಡಿದ ಬ್ಯಾಂಕ್ ಶುಲ್ಕ ಮತ್ತು ಸೇವಾ ಶುಲ್ಕ

(vi) ಕೇಬಲ್, ತಂತಿ, ಬಸ್ ಬಾರ್‌ಗಳು, ವಿದ್ಯುತ್ ನಿಯಂತ್ರಣ ಪೆಟ್ಟಿಗೆಗಳು(ಯಂತ್ರದ ಮೇಲೆ ಹೇರದೇ ಇರುವಂತಹವು), ತೈಲ ಸಂಚಾರಮಾರ್ಗ ಭೇದಕಗಳು ಅಥವಾ ಕಾರ್ಖಾನೆ ಮತ್ತು ಯಂತ್ರಗಳಿಗೆ ವಿದ್ಯುತ್ ಪೂರೈಸಲು ಅಥವಾ ಸುರಕ್ಷತೆಗಾಗಿ ಉಪಯೋಗಿಸುವ ಸೂಕ್ಷ್ಮ ಸಂಚಾರಮಾರ್ಗ ಭೇದಕಗಳು

(vii) ಅನಿಲ ಉತ್ಪಾದಿಸುವ ಘಟಕಗಳು

(viii) ದೇಶೀಯ ಯಂತ್ರಗಳನ್ನು ಉತ್ಪಾದಕಾ ಕೇಂದ್ರದಿಂದ ಘಟಕ ಸ್ಥಾಪನೆಯ ಸ್ಥಳಕ್ಕೆ ಸಾಗಣೆ ವೆಚ್ಚ(ಮಾರಾಟ ತೆರಿಗೆ ಅಥವಾ ಮೌಲ್ಯ ವರ್ಧಿತ ತೆರಿಗೆ ಮತ್ತು ಅಬಕಾರಿ ಸುಂಕವನ್ನು ಹೊರತುಪಡಿಸಿ)

(ix) ಕಾರ್ಖಾನೆ ಮತ್ತು ಯಂತ್ರಗಳನ್ನು ಅಳವಡಿಸುವುದಕ್ಕಾಗಿ ತಾಂತ್ರಿಕ ಪರಿಣತಿ ಪಡೆಯಲು ಶುಲ್ಕ

(x) ತಯಾರಿಕಾ ಪ್ರಕ್ರಿಯೆಗೆ ಸಂಬಂಧಿಸದೆ ಕಚ್ಚಾ ವಸ್ತುಗಳು ಮತ್ತು ಸಿದ್ಧ ವಸ್ತುಗಳನ್ನು ಶೇಖರಿಸಲು ಟ್ಯಾಂಕ್‌ಗಳು ಮತ್ತು

(xi) ಅಗ್ನಿ ಶಾಮಕ ಸಲಕರಣೆಗಳು

2. ಕಾರ್ಖಾನೆ ಮತ್ತು ಯಂತ್ರಗಳ ಮೇಲೆ ಮಾಡಿದ ಹೂಡಿಕೆಯನ್ನು ಲೆಕ್ಕಹಾಕುವಾಗ ಪಾರಾ 1 ರಲ್ಲಿ ಸೂಚಿಸಿದಂತೆ ಕಾರ್ಖಾನೆ ಮತ್ತು ಯಂತ್ರಗಳು ಹೊಸ ಅಥವಾ ಬಳಸಿದವುಗಳಾಗಿರಲೀ, ಮೂಲ ಬೆಲೆಯನ್ನು ಪರಿಗಣಿಸಬೇಕು. ಅದರೆ ಅಮದು ಮಾಡಿದ ಯಂತ್ರಗಳ ಮೌಲ್ಯಮಾಪನ ಮಾಡುವಾಗ ಈ ಕೆಳಗಿನವುಗಳನ್ನು ಸೇರಿಸಬೇಕು:

(i) ಆಮದು ಶುಲ್ಕ(ಬಂದರಿನಿಂದ ಕಾರ್ಖಾನೆಯ ನಿವೇಶನಕ್ಕೆ ಸಾರಿಗೆ, ಬಂದರಿನಲ್ಲಿ ನೀಡಿದ ವಿಳಂಬ ಶುಲ್ಕ ಮುಂತಾದ ಇತರ ಶುಲ್ಕಗಳನ್ನು ಹೊರತುಪಡಿಸಿ)

(ii) ಹಡಗು ರವಾನೆ ವೆಚ್ಚ

(iii) ಕಸ್ಟಂಸ್ ತೀರುವಳಿ ವೆಚ್ಚ; ಮತ್ತು

(iv) ಮಾರಾಟ ಶುಲ್ಕ ಅಥವಾ ಮೌಲ್ಯ ವರ್ಧಿತ ತೆರಿಗೆ

(ಎಫ್. ಸಂ.4(1)2006–ಎಮ್.ಎಸ್.ಎಮ್.ಇ–ಪಾಲಿಸಿ)
ಜವಾಹರ್ ಸಿರ್ಕಾರ್, ಹೆಚ್ಚುವರಿ ಕಾರ್ಯದರ್ಶಿ

**ಅನುಬಂಧ II**

**ಸಿಡ್ಬಿ ಪ್ರಸಕ್ತ ಶಾಖೆಗಳು ಸೇವೆ ನೀಡುತ್ತಿರುವ ಎಸ್.ಎಮ್.ಇ ಗುಂಪುಗಳ ಪಟ್ಟಿ**

| **ಕ್ರಮ ಸಂಖ್ಯೆ** | **ಶಾಖಾ ಕಚೇರಿ** | **ಎಸ್.ಎಸ್.ಐ ಗುಂಪುಗಳ ಸಂಖ್ಯೆ** | **ಉತ್ಪನ್ನಗಳು** |
|---|---|---|---|
| 1 | ಹೈದರಾಬಾದ್ | 5 | ಸೀಲಿಂಗ್ ಫ್ಯಾನ್, ವಿದ್ಯುತ್ ಉಪಕರಣಗಳು, ಔಶಧ ವಸ್ತುಗಳು – ಸಗಟು ಔಶಧಿ, ಕೈ ಪಂಪುಗಳು ಮತ್ತು ಕುಲುಮೆ |
| 2 | ಪಟ್ನಾ | 1 | ಹಿತ್ತಾಳಿ ಮತ್ತು ಜರ್ಮನ್ ಗೃಹೋಪಕರಣಗಳು |
| 3 | ದೆಹಲಿ | 19 | ಸ್ಟೀಲ್ ಪಾತ್ರೆಗಳು ಮತ್ತು ಹರಿತ ಗೃಹೋಪಯೋಗಿ ಸಲಕರಣೆಗಳು, ರಾಸಾಯನಿಕಗಳು, ವಿದ್ಯುತ್ ಅಭಿಯಾಂತ್ರಿಕ ಉಪಕರಣಗಳು, ಇಲೆಕ್ಟ್ರಾನಿಕ್ ವಸ್ತುಗಳು, ಆಹಾರ ಪದಾರ್ಥಗಳು, ಚರ್ಮದ ವಸ್ತುಗಳು, ಯಾಂತ್ರಿಕ ಅಭಿಯಾಂತ್ರಿಕ ಉಪಕರಣಗಳು, ಪ್ಯಾಕಿಂಗ್ ವಸ್ತುಗಳು, ಕಾಗದದ ಉತ್ಪನ್ನಗಳು, ಪ್ಲಾಸ್ಟಿಕ್ ವಸ್ತುಗಳು, ವಯರ್ ಡ್ರೋಯಿಂಗ್, ಲೋಹದ ಜೋಡಣೆಗಳು, ಪೀಠೋಪಕರಣಗಳು, ಇಲೆಕ್ಟ್ರೋಪ್ಲೇಟಿಂಗ್, ವಾಹನ ಬಿಡಿಭಾಗಗಳು, ಹೆಣೆದ ಉಡುಪುಗಳು, ಸಿದ್ಧ ಉಡುಪುಗಳು, ನೈರ್ಮಲ್ಯ ಸಂಬಂಧಿ ಉಪಕರಣಗಳು |
| 4 | ಅಹಮ್ಮದಾಬಾದ್ | 17 | ಔಶಧ ವಸ್ತುಗಳು, ವರ್ಣದ್ರವ್ಯ ಮತ್ತು ಮಧ್ಯವರ್ತೀ ವಸ್ತುಗಳು, ಅಚ್ಚುಹೊಯ್ದ ಪ್ಲಾಸ್ಟಿಕ್ ವಸ್ತುಗಳು, , ಸಿದ್ಧ ಉಡುಪುಗಳು, ಜವಳಿ ಯಂತ್ರದ ಬಿಡಿಭಾಗಗಳು, ವಜ್ರ ಸಂಸ್ಕರಣೆ, ಯಂತ್ರದ ಉಪಕರಣಗಳು, ಎರಕ ಮತ್ತು ಕುಲುಮೆ, ಸ್ಟೀಲ್ ಪಾತ್ರೆಗಳು, ಮರದ ಉತ್ಪನ್ನಗಳು ಮತ್ತು ಪೀಠೋಪಕರಣಗಳು, ಕಾಗದದ ಉತ್ಪನ್ನಗಳು, ಚರ್ಮದ ಚಪ್ಪಲಿಗಳು, ವಾಶಿಂಗ್ ಪೌಡರ್ ಮತ್ತು ಸಾಬೂನು, ಅಮೃತಶಿಲೆ ಹಲಗೆಗಳು, ಶಕ್ತಿ ಆಧಾರಿತ ಪಂಪ್‌ಗಳು, ವಿದ್ಯುತ್ ಉಪಕರಣಗಳು, ವಾಹನದ ಭಾಗಗಳು |
| 5 | ಸೂರತ್ | 4 | ವಜ್ರ ಸಂಸ್ಕರಣೆ, ವಿದ್ಯುತ್ ಚಾಲಿತ ಮಗ್ಗ, ಮರದ ಉತ್ಪನ್ನಗಳು ಮತ್ತು ಪೀಠೋಪಕರಣಗಳು, ಜವಳಿ ಯಂತ್ರಗಳು |

| | | | |
|---|---|---|---|
| 6 | ಬರೋಡಾ | 3 | ಔಶಧ ವಸ್ತುಗಳು – ಸಗಟು ಔಷಧಿ, ಪ್ಲಾಸ್ಟಿಕ್ ಸಂಸ್ಸರಣೆ ಮತ್ತು ಮರದ ಉತ್ಪನ್ನಗಳು ಮತ್ತು ಪೀಠೋಪಕರಣಗಳು |
| 7 | ಗೋವಾ | 1 | ಔಷಧ ವಸ್ತುಗಳು |
| 8 | ಫರೀದಾಬಾದ್ | 3 | ವಾಹನದ ಭಾಗಗಳು, ಎಂಜಿನಿಯರಿಂಗ್ ಗುಂಪು, ಬಂಡೆ ಒಡೆಯುವುದು |
| 9 | ಗುರ್ಗಾಂವ್ | 5 | ವಾಹನದ ಭಾಗಗಳು, ಎಲೆಕ್ಟ್ರೋನಿಕ್ ವಸ್ತುಗಳು, ವಿದ್ಯುತ್ ಅಭಿಯಾಂತ್ರಿಕ ಉಪಕರಣಗಳು, ಸಿದ್ಧ ಉಡುಪುಗಳು, ಯಾಂತ್ರಿಕ ಅಭಿಯಾಂತ್ರಿಕ ಉಪಕರಣಗಳು |
| 10 | ಪರ್ವಾನೂ (ಬಡ್ಡಿ) | 1 | ಅಭಿಯಾಂತ್ರಿಕ ಉಪಕರಣಗಳು |
| 11 | ಜಮ್ಮು | 3 | ಸ್ಟೀಲ್ ಮರುಸುರುಳಿ ಸುತ್ತುವುದು, ಎಣ್ಣೆ ಮಿಲ್ಲು, ಅಕ್ಕಿ ಗಿರಣಿ |
| 12 | ಜಂಶೆಡ್‌ಪುರ | 1 | ಎಂಜಿನಿಯರಿಂಗ್ ಮತ್ತು ಫಾಬ್ರಿಕೇಶನ್ |
| 13 | ಬೆಂಗಳೂರು | 6 | ವಿದ್ಯುತ್ ಚಾಲಿತ ಮಗ್ಗ, ಎಲೆಕ್ಟ್ರೋನಿಕ್ ವಸ್ತುಗಳು, ಸಿದ್ಧ ಉಡುಪುಗಳು, ಹಗುರ ಎಂಜಿನಿಯರಿಂಗ್, ಚರ್ಮದ ಉತ್ಪನ್ನಗಳು |
| 14 | ಕೊಚ್ಚಿ/ ಎರ್ನಾಕುಲಂ | 3 | ರಬ್ಬರ್ ಉತ್ಪನ್ನಗಳು, ವಿದ್ಯುತ್ ಚಾಲಿತ ಮಗ್ಗ ಮತ್ತು ಸಾಗರ ಉತ್ಪನ್ನ ಸಂಸ್ಕರಣೆ |
| 15 | ಔರಂಗಾಬಾದ್ | 2 | ವಾಹನದ ಭಾಗಗಳು ಮತ್ತು ಔಷಧ ವಸ್ತುಗಳು– ಸಗಟು ಔಷಧಿ |
| 16 | ಮುಂಬೈ | 11 | ಎಲೆಕ್ಟ್ರೋನಿಕ್ ವಸ್ತುಗಳು, ಔಷಧ ವಸ್ತುಗಳು– ಮೂಲ ಔಶಧಿ, ಆಟಿಕೆಗಳು(ಪ್ಲಾಸ್ಟಿಕ್), ಸಿದ್ಧ ಉಡುಪುಗಳು, ಹೆಣೆದ ಉಡುಪುಗಳು, ಯಾಂತ್ರಿಕ ಸಲಕರಣೆಗಳು, ಎಂಜಿನಿಯರಿಂಗ್ ಸಾಧನಗಳು, ರಾಸಾಯನಿಕಗಳು, ಪ್ಯಾಕಿಂಗ್ ವಸ್ತುಗಳು, ಹೇಂಡ್ ಟೂಲ್ ಗಳು, ಪ್ಲಾಸ್ಟಿಕ್ ಉತ್ಪನ್ನಗಳು |
| 17 | ನಾಗಪುರ | 6 | ವಿದ್ಯುತ್ ಚಾಲಿತ ಮಗ್ಗ, ಎಂಜಿನಿಯರಿಂಗ್ ಮತ್ತು ಫೇಬ್ರಿಕಶನ್, ಸ್ಟೀಲ್ ಪಿಠೋಪಕರಣಗಳು, ಸಿದ್ಧ ಉಡುಪುಗಳು, ಹೇಂಡ್ ಟೂಲ್‌ಗಳು, ಆಹಾರ ಸಂಸ್ಕರಣೆ |
| 18 | ಪುಣೆ | 6 | ವಾಹನದ ಭಾಗಗಳು, ಎಲೆಕ್ಟ್ರೋನಿಕ್ ವಸ್ತುಗಳು, ಅಹಾರ ಪದಾರ್ಥಗಳು, ಸಿದ್ಧ ಉಡುಪುಗಳು, ಔಷಧ ವಸ್ತುಗಳು– ಸಗಟು ಔಷಧಿ, ಫೈಬರ್ ಗ್ಲಾಸ್ |
| 19 | ಥಾಣೆ | 2 | ಔಷಧ ವಸ್ತುಗಳು– ಸಗಟು ಔಷಧಿ ಮತ್ತು ಸೀಫುಡ್ |
| 20 | ಭೋಪಾಲ್ | 1 | ಎಂಜಿನಿಯರಿಂಗ್ ಉಪಕರಣಗಳು |

| | | | |
|---|---|---|---|
| 21 | ಇಂದೋರ್ | 4 | ಔಷಧ ವಸ್ತುಗಳು– ಸಗಟು ಔಷಧಿ, ಸಿದ್ಧ ಉಡುಪುಗಳು, ಆಹಾರ ಸಂಸ್ಕರಣೆ, ವಾಹನದ ಭಾಗಗಳು |
| 22 | ಲುಧಿಯಾನ | 9 | ವಾಹನದ ಭಾಗಗಳು, ಬೈಸಿಕಲ್ ಭಾಗಗಳು, ಹೆಣೆದ ಉಡುಪುಗಳು, ಹೊಲಿಗೆ ಯಂತ್ರದ ಬಿಡಿಭಾಗಗಳು, ಕೈಗಾರಿಕಾ ಫಾಸ್ಟ್ನರ್‌ಗಳು, ಹ್ಯಾಂಡ್ ಟೂಲ್‌ಗಳು, ಯಂತ್ರದ ಸಲಕರಣೆಗಳು, ಫೋರ್ಜಿಂಗ್, ಎಲೆಕ್ಟ್ರೋಪ್ಲೇಟಿಂಗ್ |
| 23 | ಜೈಪುರ್ | 7 | ಹರಳು ಮತ್ತು ಒಡವೆಗಳು, ಬಾಲ್ ಬೇರಿಂಗ್, ವಿದ್ಯುತ್ ಅಭಿಯಾಂತ್ರಿಕ ಉಪಕರಣಗಳು, ಆಹಾರ ಪದಾರ್ಥಗಳು, ಉಡುಪು ತಯಾರಿಕೆ, ಸುಣ್ಣ, ಯಾಂತ್ರಿಕ ಎಂಜಿನಿಯರಿಂಗ್ ಉಪಕರಣಗಳು |
| 24 | ಚನ್ನೈ | 3 | ವಾಹನದ ಭಾಗಗಳು, ಚರ್ಮ ಉತ್ಪನ್ನಗಳು, ಎಲೆಕ್ಟ್ರೋಪ್ಲೇಟಿಂಗ್ |
| 25 | ಕೊಯಂಬತೋರ್ | 6 | ಡೀಸೆಲ್ ಎಂಜಿನ್, ಕೃಷಿ ಉಪಕರಣಗಳು, ಯಂತ್ರದ ಉಪಕರಣಗಳು, ಎರಕ ಮತ್ತು ಕುಲುಮೆ, ವಿದ್ಯುತ್ ಚಾಲಿತ ಮಗ್ಗ, ಹಿಟ್ಟು ರುಬ್ಬುವ ಯಂತ್ರಗಳು |
| 26 | ತಿರುಪುರ್ | 1 | ಹೆಣೆದ ಉಡುಪುಗಳು |
| 27 | ನೊಯಿಡಾ/ ಘಜಿಯಾಬಾದ್ | 10 | ಇಲೆಕ್ಟ್ರೋನಿಕ್ ವಸ್ತುಗಳು, ಆಟಿಕೆಗಳು, ರಾಸಾಯನಿಕಗಳು, ವಿದ್ಯುತ್ ಅಭಿಯಾಂತ್ರಿಕ ಸಲಕರಣೆಗಳು, ಉಡುಪು ತಯಾರಿಕೆ, ಯಾಂತ್ರಿಕ ಅಭಿಯಾತ್ರಿಕ ಸಲಕರಣೆಗಳು, ಪೇಕಿಂಗ್ ವಸ್ತುಗಳು, ರಾಸಾಯನಿಕಗಳು |
| 28 | ಕಾನ್ಪುರ್ | 3 | ಕುದುರೆ ಜೀನು ತಯಾರಿಕೆ, ಹತ್ತಿ ಹೆಣೆದ ಉಡುಪುಗಳು, ಚರ್ಮದ ವಸ್ತುಗಳು |
| 29 | ವಾರಣಾಸಿ | 4 | ಶೀಟ್ ವರ್ಕ್(ಗ್ಲೋಬ್ ಲಾಂಪ್), ವಿದ್ಯುತ್ ಚಾಲಿತ ಮಗ್ಗ, ಕೃಷಿ ಉಪಕರಣಗಳು, ವಿದ್ಯುತ್ ಫೇನ್ |
| 30 | ಡೆಹ್ರಾಡೊನ್ | 1 | ಸೂಕ್ಷ್ಮ ನಿರ್ವಾತ ಬಲ್ಬ್ |
| 31 | ಸಾಶಿಕ್(ಶೀಘ್ರ ತೆರೆಯಲಿದೆ) | 1 | ಸ್ಟೀಲ್ ಪೀಠೋಪಕರಣಗಳು |
| | ಒಟ್ಟು | 149 | |

**ಅನುಬಂಧ III**

**ಭಾರತದಲ್ಲಿರುವ ಎಸ್.ಎಮ್.ಇ ಗುಂಪುಗಳ ಪಟ್ಟಿ(ಯುನಿಡೊದವರು ಗುರುತಿಸಿದ)**

| ಕ್ರಮ ಸಂಖ್ಯೆ | ರಾಜ್ಯ | ಜಿಲ್ಲೆ | ತಾಣ | ಉತ್ಪನ್ನಗಳು |
|---|---|---|---|---|
| 1 | ಆಂಧ್ರಪ್ರದೇಶ | ಅನಂತಪುರ್ | ರಾಯದುರ್ಗ | ಸಿದ್ದ ಉಡುಪುಗಳು |
| 2 | ಆಂಧ್ರಪ್ರದೇಶ | ಅನಂತಪುರ್ | ಚಿತ್ರದುರ್ಗ | ಜೀನ್ಸ್ ಉಡುಪುಗಳು |
| 3 | ಆಂಧ್ರಪ್ರದೇಶ | ಚಿತ್ತೂರ್ | ನಗರಿ | ವಿದ್ಯುತ್ ಚಾಲಿತ ಮಗ್ಗ |
| 4 | ಆಂಧ್ರಪ್ರದೇಶ | ಚಿತ್ತೂರ್ | ವೆಂಟಿಮಲ್ಪ, ಶ್ರೀಕಾಳಹಸ್ತಿ, ಚುಂಡೂರ್ | ಹಿತ್ತಾಳೆ ಪಾತ್ರೆಗಳು |
| 5 | ಆಂಧ್ರಪ್ರದೇಶ | ಪೂರ್ವ ಗೋದಾವರಿ | ಪೂರ್ವ ಗೋದಾವರಿ | ಅಕ್ಕಿ ಗಿರಣಿ |
| 6 | ಆಂಧ್ರಪ್ರದೇಶ | ಪೂರ್ವ ಗೋದಾವರಿ | ರಾಜಮುಂದ್ರಿ | ಗ್ರಾಫೈಟ್ ಮೂಸೆ |
| 7 | ಆಂಧ್ರಪ್ರದೇಶ | ಪೂರ್ವ ಗೋದಾವರಿ | ಪೂರ್ವ ಗೋದಾವರಿ | ತೆಂಗಿನ ನಾರು ಮತ್ತು ನಾರು ಉತ್ಪನ್ನಗಳು |
| 8 | ಆಂಧ್ರಪ್ರದೇಶ | ಪೂರ್ವ ಗೋದಾವರಿ | ರಾಜಮುಂದ್ರಿ | ಅಲ್ಯೂಮೀನಿಯಂ ಪಾತ್ರೆಗಳು |
| 9 | ಆಂಧ್ರಪ್ರದೇಶ | ಪೂರ್ವ ಗೋದಾವರಿ ಮತ್ತು ಪಶ್ಚಿಮ ಗೋದಾವರಿ | ಪೂರ್ವ ಗೋದಾವರಿ ಮತ್ತು ಪಶ್ಚಿಮ ಗೋದಾವರಿ | ರಿಫ್ರಾಕ್ಟರಿ ಉತ್ಪನ್ನಗಳು |
| 10 | ಆಂಧ್ರಪ್ರದೇಶ | ಗುಂಟೂರು | ಗುಂಟೂರು | ವಿದ್ಯುತ್ ಚಾಲಿತ ಮಗ್ಗ |
| 11 | ಆಂಧ್ರಪ್ರದೇಶ | ಗುಂಟೂರು | ಗುಂಟೂರು | ಸುಣ್ಣ ತಯಾರಿಸುವುದು |
| 12 | ಆಂಧ್ರಪ್ರದೇಶ | ಗುಂಟೂರು | ಮಚೆರ್ಲ | ಮರದ ಪೀಠೋಪಕರಣಗಳು |
| 13 | ಆಂಧ್ರಪ್ರದೇಶ | ಹೈದರಾಬಾದ್ | ಹೈದರಾಬಾದ್ | ಸೀಲಿಂಗ್ ಫೇನ್ |
| 14 | ಆಂಧ್ರಪ್ರದೇಶ | ಹೈದರಾಬಾದ್ | ಹೈದರಾಬಾದ್ | ಇಲೆಕ್ಟ್ರೋನಿಕ್ ವಸ್ತುಗಳು |
| 15 | ಆಂಧ್ರಪ್ರದೇಶ | ಹೈದರಾಬಾದ್ | ಹೈದರಾಬಾದ್ | ಔಷಧ ಪದಾರ್ಥಗಳು – ಸಗಟು ಔಷಧಿಗಳು |
| 16 | ಆಂಧ್ರಪ್ರದೇಶ | ಹೈದರಾಬಾದ್ | ಮುಶೀರಾಬಾದ್ | ಚರ್ಮ ಹದಮಾಡುವುದು |
| 17 | ಆಂಧ್ರಪ್ರದೇಶ | ಹೈದರಾಬಾದ್ | ಹೈದರಾಬಾದ್ | ಕೈ ಪಂಪುಗಳು |
| 18 | ಆಂಧ್ರಪ್ರದೇಶ | ಹೈದರಾಬಾದ್ | ಹೈದರಾಬಾದ್ | ಎರಕ ಹೊಯ್ಯುವುದು |
| 19 | ಆಂಧ್ರಪ್ರದೇಶ | ಕರೀಂನಗರ್ | ಸಿರ್ಸಿಲ್ಲ | ವಿದ್ಯುತ್ ಚಾಲಿತ ಮಗ್ಗ |

| | | | | |
|---|---|---|---|---|
| 20 | ಆಂಧ್ರಪ್ರದೇಶ | ಕೃಷ್ಣ | ಮಚಲೀಪಟ್ಣಂ | ಗೋಲ್ಡ್ ಪ್ಲಟಿಂಗ್ ಮತ್ತು ನಕಲು ಒಡವೆಗಳು |
| 21 | ಆಂಧ್ರಪ್ರದೇಶ | ಕೃಷ್ಣ | ವಿಜಯವಾಡ | ಅಕ್ಕಿ ಗಿರಣಿ |
| 22 | ಆಂಧ್ರಪ್ರದೇಶ | ಕೃಷ್ಣ | ಚುಂಡೂರ್, ಕವಡಿಗುಡ, ಚಾರ್ಮಿನಾರ್, ವಿಜಯವಡ | ಸ್ಟೀಲ್ ಪೀಠೋಪಕರಣಗಳು |
| 23 | ಆಂಧ್ರಪ್ರದೇಶ | ಕರ್ನೂಲ್ | ಅಡೋನಿ | ಎಣ್ಣೆ ಮಿಲ್ಲು |
| 24 | ಆಂಧ್ರಪ್ರದೇಶ | ಕರ್ನೂಲ್ | ಕರ್ನೂಲ್ | ಕೃತಕ ವಜ್ರ |
| 25 | ಆಂಧ್ರಪ್ರದೇಶ | ಕರ್ನೂಲ್, ಕಡಪ | ಕರ್ನೂಲ್(ಬನಗನಪಲ್ಲೆ, ಬೇತಂಚೆರಿಯ, ಕೋಲಿಮಿಗುಂಡ್ಲ) ಕಡಪ | ಹಸುಗಲ್ಲು ನಯಗೊಳಿಸುವುದು |
| 26 | ಆಂಧ್ರಪ್ರದೇಶ | ಪ್ರಕಾಶಂ | ಮರ್ಕಾಪುರಂ | ಕಪ್ಪು ಹಲಗೆ |
| 27 | ಆಂಧ್ರಪ್ರದೇಶ | ರಂಗ ರೆಡ್ಡಿ | ಬಲನಗರ್, ಜೀಡಿಮೆಟ್ಲ ಮತ್ತು ಕುಕಟ್ಪಳ್ಳಿ | ಯಂತ್ರದ ಸಲಕರಣೆಗಳು |
| 28 | ಆಂಧ್ರಪ್ರದೇಶ | ಶ್ರೀಕಾಕುಲಂ | ಪಲಸ | ಗೇರು ಸಂಸ್ಕರಣೆ |
| 29 | ಆಂಧ್ರಪ್ರದೇಶ | ವಿಶಾಖಪಟ್ಣಂ, ಪೂರ್ವ ಗೋದಾವರಿ | ವಿಶಾಖಪಟ್ಣಂ, ಕಾಕಿನಾಡ | ಸಾಗರ ಆಹಾರ |
| 30 | ಆಂಧ್ರಪ್ರದೇಶ | ವಾರಂಗಲ್ | ವಾರಂಗಲ್ | ವಿದ್ಯುತ್ ಚಾಲಿತ ಮಗ್ಗ |
| 31 | ಆಂಧ್ರಪ್ರದೇಶ | ವಾರಂಗಲ್ | ವಾರಂಗಲ್ | ಹಿತ್ತಾಳೆ ಪಾತ್ರೆಗಳು |
| 32 | ಆಂಧ್ರಪ್ರದೇಶ | ಪಶ್ಚಿಮ ಗೋದಾವರಿ | ಪಶ್ಚಿಮ ಗೋದಾವರಿ | ಅಕ್ಕಿ ಗಿರಣಿ |
| 33 | ಬಿಹಾರ್ | ಬೆಗುಸರೈ | ಬರೌಣಿ | ಎಂಜಿನಿಯರಿಂಗ್ ಮತ್ತು ಫೇಬ್ರಿಕೇಶನ್ |
| 34 | ಬಿಹಾರ್ | ಮುಜ಼ಾಫ್ಫರ್ ಪುರ್ | ಮುಜ಼ಫ್ಫರ್ ಪುರ್ | ಆಹಾರ ಪದಾರ್ಥಗಳು |
| 35 | ಬಿಹಾರ್ | ಪಾಟ್ಣ | ಪಾಟ್ಣ | ಹಿತ್ತಾಳೆ ಮತ್ತು ಜರ್ಮನ್ ಬೆಳ್ಳಿ ಪಾತ್ರೆಗಳು |
| 36 | ಛತ್ತೀಸ್ ಗರ್ | ದುರ್ಗ್, ರಾಜ್‌ನಂದ್ ಗಾಂವ್, ರೈಪುರ್ | ದುರ್ಗ್, ರಾಜ್‌ನಂದ್ ಗಾಂವ್, ರೈಪುರ್ | ಸ್ಟೀಲ್ ಮರುಸುರುಳಿ ಸುತ್ತುವುದು |
| 37 | ಛತ್ತೀಸ್ ಗರ್ | ದುರ್ಗ್, ರೈಪುರ್ | ದುರ್ಗ್, ರೈಪುರ್ | ಎರಕ ಮತ್ತು ಲೋಹ ಜೋಡಣೆ |
| 38 | ದೆಹಲಿ | ವಾಯುವ್ಯ ದೆಹಲಿ | ವಜ಼ೀರ್ಪುರ್, ಬದ್ಲಿ | ಸ್ಟೈನ್ಲೆಸ್ ಸ್ಟೀಲ್ |

| | | | | |
|---|---|---|---|---|
| | | | | ಪಾತ್ರೆಗಳು ಮತ್ತು ಹರಿತ ಸಾಧನಗಳು |
| 39 | ದೆಹಲಿ | ದಕ್ಷಿಣ ಮತ್ತು ಪಸ್ಚಿಮ ದೆಹಲಿ | ಒಖ್ಲ, ಮಾಯಾಪುರಿ | ರಾಸಾಯನಿಕ ಪದಾರ್ಥಗಳು |
| 40 | ದೆಹಲಿ | ಪಶ್ಚಿಮ ಮತ್ತು ದಕ್ಷಿಣ | ನರೈನ ಮತ್ತು ಓಖ್ಲ | ವಿದ್ಯುತ್ ಎಂಜಿನಿಯರಿಂಗ್ ಸಲಕರಣೆಗಳು |
| 41 | ದೆಹಲಿ | ಪಶ್ಚಿಮ ಮತ್ತು ದಕ್ಷಿಣ | ನರೈನ ಮತ್ತು ಓಖ್ಲ | ಎಲೆಕ್ಟ್ರೋನಿಕ್ ವಸ್ತುಗಳು |
| 42 | ದೆಹಲಿ | ಉತ್ತರ ದೆಹಲಿ | ಲೋರೆನ್ಸ್ ರೋಡ್ | ಆಹಾರ ಪದಾರ್ಥಗಳು |
| 43 | ದೆಹಲಿ | ದಕ್ಷಿಣ ದೆಹಲಿ | ಓಖ್ಲ, ವಜ಼ಿಪುರ ಫ್ಲಾಟೆಡ್ ಕಾರ್ಖಾನೆಗಳ ಸಂಕೀರ್ಣ | ಚರ್ಮದ ಪದಾರ್ಥಗಳು |
| 44 | ದೆಹಲಿ | ದಕ್ಷಿಣ, ಪಶ್ಚಿಮ ದೆಹಲಿ | ಓಖ್ಲ, ಮಾಯಾಪುರಿ, ಆನಂದ್ ಪರ್ಬತ್ | ಯಾಂತ್ರಿಕ ಎಂಜಿನಿಯರಿಂಗ್ ಸಲಕರಣೆಗಳು |
| 45 | ದೆಹಲಿ | ಪಶ್ಚಿಮ, ದಕ್ಷಿಣ ಪೂರ್ವ ದೆಹಲಿ | ನರೈನ, ಓಖ್ಲ, ಪಟ್‌ಪರ್ಗಂಜ್ | ಪ್ಯಾಕಿಂಗ್ ವಸ್ತುಗಳು |
| 46 | ದೆಹಲಿ | ದಕ್ಷಿಣ, ಪಶ್ಚಿಮ | ನರೈನ, ಓಖ್ಲ, | ಕಾಗದದ ಉತ್ಪನ್ನಗಳು |
